**ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984**

**ಪ್ರಕರಣಗಳ ಕ್ರಮ ಪಟ್ಟಿ**

ಪ್ರಕರಣಗಳು:


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.
2. ಪರಿಭಾಷೆಗಳು.
3. ಲೋಕಾಯುಕ್ತ ಮತ್ತು ಉಪಲೋಕಾಯುಕ್ತರ ನೇಮಕ.
4. ಲೋಕಾಯುಕ್ತ ಅಥವಾ ಉಪ ಲೋಕಾಯುಕ್ತನು ಇತರ ಯಾವುದೇ ಪದವನ್ನು ಧಾರಣ ಮಾಡತಕ್ಕದಲ್ಲ.
5. ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತನ ಪದಾವಧಿ ಮತ್ತು ಇತರ ಸೇವಾ ಷರತ್ತುಗಳು.
6. ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ಪದಚ್ಯುತಿ.
7. ಲೋಕಾಯುಕ್ತ ಮತ್ತು ಒಬ್ಬ ಉಪಲೋಕಾಯುಕ್ತನು ತನಿಖೆ ಮಾಡಬಹುದಾದ ವಿಷಯಗಳು.
8. ತನಿಖೆಗೆ ಒಳಪಡದ ವಿಷಯಗಳು.
9. ಫಿರ್ಯಾದುಗಳಿಗೆ ಮತ್ತು ತನಿಖೆಗೆ ಸಂಬಂಧಿಸಿದ ಉಪಬಂಧಗಳು.
10. ಶೋಧನಾ ವಾರೆಂಟ್, ಮೊದಲಾದವುಗಳನ್ನು ಹೊರಡಿಸುವಿಕೆ.
11. ಸಾಕ್ಷ್ಯ.
12. ಲೋಕಾಯುಕ್ತನ ವರದಿಗಳು, ಮೊದಲಾದವು.
13. ಲೋಕಾಯುಕ್ತನು, ನಿರ್ದೇಶಿಸಿದರೆ, ಸಾರ್ವಜನಿಕ ನೌಕರನು ತನ್ನ ಪದವನ್ನು ರಿಕ್ತಗೊಳಿಸುವುದು ಮುಂತಾದವು.
14. ಅಭಿಯೋಜನೆಗಳ ಪ್ರಾರಂಭ.
15. ಲೋಕಾಯುಕ್ತನ ಸಿಬ್ಬಂದಿ ವರ್ಗ, ಮೊದಲಾದವು.
16. ಮಾಹಿತಿಯ ಗೌಪ್ಯ.
17. ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಉದ್ದೇಶಪೂರ್ವಕವಾಗಿ ಅಪಮಾನ ಮಾಡುವುದು ಅಥವಾ ತಡೆ ಉಂಟುಮಾಡುವುದು ಅಥವಾ ಅಪಖ್ಯಾತಿ ತರುವುದು.

17A. ಅಪಮಾನಕ್ಕಾಗಿ ಶಿಕ್ಷೆ ವಿಧಿಸಲು ಅಧಿಕಾರ.

18. ರಕ್ಷಣೆ.
19. ಉಪಲೋಕಾಯುಕ್ತನಿಗೆ ಹೆಚ್ಚಿನ ಪ್ರಕಾರ್ಯಗಳ ಪ್ರದಾನ.
20. ಸುಳ್ಳು ಫಿರ್ಯಾದಿಗಾಗಿ ಅಭಿಯೋಜನೆ.
21. ಪ್ರತ್ಯಾಯೋಜಿಸಲು ಅಧಿಕಾರ.
22. ಸಾರ್ವಜನಿಕ ನೌಕರರು ಸ್ವತ್ತಿನ ಹೇಳಿಕೆಯನ್ನು ಒಪ್ಪಿಸುವುದು.
23. ನಿಯಮಗಳ ರಚನಾಧಿಕಾರ.
24. ಸಂದೇಹಗಳ ನಿವಾರಣೆ.
25. ತೊಂದರೆಗಳ ನಿವಾರಣೆ.
26. ನಿರಸನ ಮತ್ತು ಉಳಿಸುವಿಕೆಗಳು.

ಮೊದಲನೇ ಅನುಸೂಚಿ

ಎರಡನೇ ಅನುಸೂಚಿ


*****

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**I**

**1985ರ ಅಧಿನಿಯಮ 4.**-ಆಡಳಿತ ನಿರ್ವಹಣೆಯಲ್ಲಿ ನಡೆದ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮತ್ತು ಅಶಿಸ್ತಿನ ಪ್ರಕರಣಗಳೂ ಸೇರಿದಂತೆ, ಆಡಳಿತ ಕ್ರಮಗಳ ಸಂಬಂಧದಲ್ಲಿ ಬಂದ ಫಿರ್ಯಾದುಗಳ ಬಗ್ಗೆ ವಿಚಾರಣೆ ನಡೆಸುವ ಮೂಲಕ, ಸಾರ್ವಜನಿಕ ಆಡಳಿತ ಗುಣಮಟ್ಟಗಳನ್ನು ಸುಧಾರಿಸುವ ಉದ್ದೇಶಕ್ಕಾಗಿ ಲೋಕಾಯುಕ್ತವೆಂಬ ಸಂಸ್ಥೆಯನ್ನು ರಚಿಸುವಂತೆ ಆಡಳಿತ ಸುಧಾರಣಾ ಸಮಿತಿಯು ಶಿಫಾರಸ್ಸು ಮಾಡಿದೆ.

ಲೋಕಾಯುಕ್ತ ಎಂಬ ಸಂಸ್ಥೆಯನ್ನು ರಚಿಸುವುದು ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿದ್ದ ಚುನಾವಣಾ ಘೋಷಣೆಗಳಲ್ಲಿ ಒಂದು.

ಈ ವಿಧೇಯಕವು, ಸಾರ್ವಜನಿಕ ನೌಕರರ ನಡತೆಗೆ ಸಂಬಂಧಿಸಿದ ಆಪಾದನೆಗಳನ್ನು ಅಥವಾ ದೂರುಗಳನ್ನು ಪರೀಶಿಲಿಸಲು ಮತ್ತು ವರದಿ ಮಾಡಲು ಒಬ್ಬ ಲೋಕಾಯುಕ್ತ ಮತ್ತು ಒಬ್ಬರು ಅಥವಾ ಹೆಚ್ಚು ಉಪಲೋಕಾಯುಕ್ತರ ನೇಮಕ ಮಾಡಲು ಉಪಬಂಧ ಕಲ್ಪಿಸುತ್ತದೆ.

ಆ ಅಧಿನಿಯಮದ ವ್ಯಾಪ್ತಿಗೆ ಒಳಪಡುವ ಸಾರ್ವಜನಿಕ ನೌಕರರು,-

(1) ಮುಖ್ಯ ಮಂತ್ರಿಗಳು;

(2) ಎಲ್ಲ ಇತರ ಮಂತ್ರಿಗಳು;

(3) ರಾಜ್ಯ ಸರ್ಕಾರದ ಎಲ್ಲ ಅಧಿಕಾರಿಗಳು;

(4) ಸಹಕಾರಿ ಸಂಘಗಳೂ ಸೇರಿದಂತೆ, ರಾಜ್ಯ ವಿಧಾನಮಂಡಲದ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ರಚಿತವಾದ ಸ್ಥಳೀಯ ಪ್ರಾಧಿಕಾರಗಳು, ಶಾಸನಬದ್ಧ ನಿಕಾಯಗಳು ಅಥವಾ ನಿಗಮಗಳ ಅಧ್ಯಕ್ಷರು, ಉಪಾಧ್ಯಕ್ಷರು;

(5) ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ, ಸ್ಥಳೀಯ ಪ್ರಾಧಿಕಾರಗಳು, ನಿಗಮಗಳಲ್ಲಿ ರಾಜ್ಯ ಸರ್ಕಾರವು ಶೇಕಡಾ ಐವತ್ತೊಂದಕ್ಕೆ ಕಡಿಮೆಯಲ್ಲದ ಷೇರುಗಳನ್ನು ಹೊಂದಿರುವ ಕಂಪೆನಿಯಲ್ಲಿ, ಸಂಘಗಳ ನೋಂದಣಿ ಅಧಿನಿಯಮದ ಮೇರೆಗೆ ನೋಂದಾಯಿತವಾದ ಸಂಘಗಳಲ್ಲಿ, ರಾಜ್ಯ ವಿಧಾನಮಂಡಲದ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಸಹಕಾರಿ ಸಂಘಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳು.

ಫಿರ್ಯಾದಿನ ಸಂಬಂಧದಲ್ಲಿ ತನಿಖೆ ನಡೆಸಿದ ತರುವಾಯ ಸರ್ಕಾರಿ ನೌಕರನ ವಿರುದ್ಧದ ಆಪಾದನೆಯು ರುಜುವಾತಾಗಿದೆಯೆಂದು ಲೋಕಾಯುಕ್ತನು ಪರಿಗಣಿಸಿದರೆ ಅವನು ಧಾರಣ ಮಾಡಿದ ಹುದ್ದೆಯಲ್ಲಿ ಮುಂದುವರಿಯತಕ್ಕದ್ದಲ್ಲವೆಂದು ಘೋಷಣೆ ಮಾಡಬೇಕು ಮತ್ತು ಘೋಷಣೆಯನ್ನು ಸಕ್ಷಮ ಪ್ರಾಧಿಕಾರಿಯು ಅಂಗೀಕರಿಸಿದರೆ, ಸಂಬಂಧಪಟ್ಟ ಸರ್ಕಾರಿ ನೌಕರನು, ಮುಖ್ಯ ಮಂತ್ರಿ ಅಥವಾ ಇತರ ಯಾವೊಬ್ಬ ಮಂತ್ರಿ ಅಥವಾ ರಾಜ್ಯ ವಿಧಾನಮಂಡಲದ ಸದಸ್ಯನಾಗಿದ್ದರೆ, ಘೋಷಣೆಯನ್ನು ಅಂಗೀಕರಿಸಿದ ದಿನಾಂಕದಿಂದ ತನ್ನ ಹುದ್ದೆಗೆ ರಾಜಿನಾಮೆ ಕೊಡತಕ್ಕದ್ದು ಮತ್ತು ಅವನು ಇತರ ಸರ್ಕಾರೇತರ ನೌಕರನಾಗಿದ್ದರೆ, ಅವನನ್ನು ನಿಲಂಬನದಲ್ಲಿರಿಸಲಾಗಿದೆ ಎಂದು ಭಾವಿಸತಕ್ಕದ್ದು.

ತನಿಖೆ ನಡೆಸಿದ ತರುವಾಯ ಸರ್ಕಾರಿ ನೌಕರನು ಯಾವುದೇ ದಂಡನೀಯ ಅಪರಾಧ ಮಾಡಿದ್ದಾನೆಂದು ಲೋಕಾಯುಕ್ತನಿಗೆ ಮನದಟ್ಟಾದರೆ, ಇತರ ಯಾವುದೇ ಪ್ರಾಧಿಕಾರಕ್ಕೆ ಈ ಬಗ್ಗೆ ಉಲ್ಲೇಖಿಸದೇ ಅಭಿಯೋಜನೆಯನ್ನು ಪ್ರಾರಂಭಿಸಬಹುದು, ಇಂಥ ಅಭಿಯೋಜನೆಯ ಸಂಬಂಧದಲ್ಲಿ, ಯಾವುದೇ ಕಾನೂನಿನ ಮೇರೆಗೆ ಅಗತ್ಯವಾದ ಯಾವುದೇ ಪೂರ್ವ ಮಂಜೂರಾತಿಯನ್ನು ನೀಡಲಾಗಿದೆ ಎಂದು ಭಾವಿಸತಕ್ಕದ್ದು.

ಜಾಗೃತ ಆಯೋಗವನ್ನು ರದ್ದುಪಡಿಸಲಾಗಿದೆ. ಆದರೆ, ಜಾಗೃತ ಆಯೋಗದ ಮುಂದೆ ಇತ್ಯರ್ಥವಾಗದೇ ಉಳಿದಿರುವ ಎಲ್ಲ ತನಿಖೆ ಮತ್ತು ವಿಚಾರಣೆಗಳನ್ನು ಮತ್ತು ಇತರ ಶಿಸ್ತಿನ ವ್ಯವಹರಣೆಗಳನ್ನು ಲೋಕಾಯುಕ್ತನಿಗೆ ವರ್ಗಾಯಿಸಲಾಗುವುದು.

ಆದರಲ್ಲಿ ಇನ್ನೂ ಇತರ ಆನುಷಂಗಿಕ ಉಪಬಂಧಗಳಿವೆ.

ಆದ್ದರಿಂದ ಈ ವಿಧೇಯಕ.

(1984ರ ವಿಧಾನಸಭಾ ವಿಧೇಯಕ ಸಂಖ್ಯೆ 17ರಲ್ಲಿದ್ದಂತೆ)

## II

**1986ರ ಅಧಿನಿಯಮ 15**.- ಲೋಕಾಯುಕ್ತ ಮತ್ತು ಉಪಲೋಕಾಯುಕ್ತರಿಗೆ ಸಂದೇಯವಿರುವ ವೇತನವನ್ನು ತುಟ್ಟಿಭತ್ಯವನ್ನು ಹೊರತುಪಡಿಸಿ, ಅನುಕ್ರಮವಾಗಿ 7500 ರೂ. ಗಳ ಮತ್ತು 6000 ರೂ. ಗಳಿಗೆ ಹೆಚ್ಚಿಸುವುದಕ್ಕಾಗಿ ಮತ್ತು ಲೋಕಾಯುಕ್ತ ಅಥವಾ ಉಪಲೋಕಾಯುಕ್ತರಾಗಿ ನೇಮಕಗೊಳ್ಳುವುದಕ್ಕೆ ಮೊದಲು, ಅವರು ಸ್ವೀಕರಿಸಿದ/ಸ್ವೀಕರಿಸುತ್ತಿದ್ದ ನಿವೃತ್ತಿ ವೇತನ ಮತ್ತು ಉಪಾದಾನ ಅಥವಾ ನಿವೃತ್ತಿವೇತನಗಳ ಪರಿವರ್ತಿತ ಮೌಲ್ಯದ ಸಲುವಾಗಿ, ಲೋಕಾಯುಕ್ತ ಮತ್ತು ಉಪಲೋಕಾಯುಕ್ತರ ವೇತನದಿಂದ ಯಾವುದೇ ಕಡಿತವನ್ನು ಸಹ ಮಾಡಬಾರದೆಂದು ಉಪಬಂಧಿಸುವುದಕ್ಕಾಗಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 (1985ರ ಕರ್ನಾಟಕ ಅಧಿನಿಯಮ 4)ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಯಿತು.

ರಾಜ್ಯವಿಧಾನಮಂಡಲದ ಎರಡೂ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದಲೂ ಮತ್ತು ವಿಷಯವು ತುರ್ತಾಗಿದ್ದುದರಿಂದಲೂ, ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧ್ಯಾದೇಶ, 1985 (1985ರ ಕರ್ನಾಟಕ ಅಧ್ಯಾದೇಶ 10) ನ್ನು ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶದ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಪತ್ರಿಕೆ) ಭಾಗ-4ಎ ದಿನಾಂಕ 3-2-1986 ನಂ. 71)
(1986ರ ವಿಧಾನಸಭಾ ವಿಧೇಯಕ ಕ್ರಮಾಂಕ 5)

## III

**1986ರ ಅಧಿನಿಯಮ 31**.- ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984, (ಕರ್ನಾಟಕ ಅದಿನಿಯಮ 1985ರ ಸಂಖ್ಯೆ4)ನ್ನು ಈ ಕೆಳಕಂಡ ಉದ್ದೇಶಗಳಿಗಾಗಿ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

(ಅ) ಲೋಕಾಯುಕ್ತರಿಗೆ ಅಥವಾ ಉಪಲೋಕಾಯುಕ್ತರಿಗೆ ಮೊಕದ್ದಮೆಗಳನ್ನು ತನಿಖೆ ಮಾಡಲು ಕಳುಹಿಸುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡುವುದು (ಮಸೂದೆಯ ಕಲಂ 3(2)(ಎ),

(ಆ) ಲೋಕಾಯುಕ್ತ, ಉಪಲೋಕಾಯುಕ್ತರುಗಳಿಗೆ ಕೆಲಸವನ್ನು ನಿರ್ದೇಶಿಸುವುದು ಮತ್ತು ಅವರ ಹುದ್ದೆಯು ಸಾಂದರ್ಭಿಕವಾಗಿ ಖಾಲಿ ಬಿದ್ದರೆ ಆ ಕೆಲಸವನ್ನು ಇನ್ನೊಬ್ಬ ಉಪಲೋಕಾಯುಕ್ತ, ಇದ್ದರೆ, ಅವರಿಗೆ ವಹಿಸುವುದು, ಇಲ್ಲದಿದ್ದರೆ ತಾವೇ ಸ್ವತಃ ಆ ಕೆಲಸವನ್ನು ವಹಿಸಿಕೊಳ್ಳುವ ಅಧಿಕಾರವನ್ನು ಲೋಕಾಯುಕ್ತರಿಗೆ ನೀಡುವುದು (ಮಸೂದೆಯ ಕಲಂ 3(4),

(ಇ) ಲೋಕಾಯುಕ್ತರಿಗೆ ಪೊಲೀಸ್ ಮುಖಾಂತರ ಶೋಧನ ಅಧಿಪತ್ರವನ್ನು ಸ್ಥಳ ಶೋಧನೆಯಲ್ಲದೆ ವ್ಯಕ್ತಿ ಶೋಧನೆಗೂ ಹೊರಡಿಸಲು ಅಧಿಕಾರವನ್ನು ನೀಡುವುದು (ಮಸೂದೆಯ ಕಲಂ 5(1) ಮತ್ತು 2(1ಎ),

(ಈ) ಲೋಕಾಯುಕ್ತರಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಅಧಿಕಾರಿಗಳನ್ನು ಮತ್ತು ಇತರ ಸಿಬ್ಬಂದಿ ವರ್ಗದವರನ್ನು ಲೋಕಾಯುಕ್ತರ ಆಡಳಿತ ಅಧೀನ ಮತ್ತು ಶಿಸ್ತಿನ ಹಿಡಿತದಲ್ಲಿ ತರುವುದು (ಮಸೂದೆಯ ಕಲಂ 9),

(ಉ) ಸುಳ್ಳು ಫಿರ್ಯಾದು ಮಾಡಿದವರ ಮೇಲೆ ಸಂಬಂಧಪಟ್ಟ ವ್ಯಕ್ತಿಗೆ ನ್ಯಾಯಾಲಯದಲ್ಲಿ ಅಭಿಯೋಗ ನಡೆಸಲು ಪರವಾನಗಿಯನ್ನು ನೀಡುವ ಅಧಿಕಾರವನ್ನು ಲೋಕಾಯುಕ್ತ ಅಥವಾ ಉಪಲೋಕಾಯುಕ್ತರಿಗೆ ಕೊಡುವುದು (ಮಸೂದೆಯ ಕಲಂ 11),

(ಊ) ಇತರೆ ತಿದ್ದುಪಡಿಗಳು ಚಿಕ್ಕ ಪ್ರಮಾಣದಲ್ಲಿ ಇದ್ದ ಅಧಿನಿಯಮನ್ನು ಹೆಚ್ಚು ನಿರರ್ಗೊಳಿಸುವುದು.

ಈ ಉದ್ದೇಶಕ್ಕನುಗುಣವಾಗಿ, ಕರ್ನಾಟಕ ಲೋಕಾಯುಕ್ತ (ಎರಡನೇ ತಿದ್ದುಪಡಿ) ಅಧ್ಯಾದೇಶ, 1986 (ಕರ್ನಾಟಕ ಅಧ್ಯಾದೇಶ, 1986ರ ಸಂಖ್ಯೆ 8)ನ್ನು ಪ್ರಖ್ಯಾಪಿಸಲಾಸಿತು, ಕಾರಣ ಈ ವಿಧೇಯಕವನ್ನು ಸದರಿ ಅಧ್ಯಾದೇಶವನ್ನು ಪ್ರತಿಸ್ಥಾಪಿಸಲು ಮಂಡಿಸಲಾಗಿದೆ.

(1986ರ ವಿಧಾನಸಭಾ ವಿಧೇಯಕ ಕ್ರಮಾಂಕ 37)

## IV

**1988ರ ಅಧಿನಿಯಮ 1**.- ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 (1985ರ ಕರ್ನಾಟಕ ಅಧಿನಿಯಮ ಸಂಖ್ಯೆ 4)-ಇದು, ದಿನಾಂಕ 15-1-1986ರಂದುಜಾರಿಯಲ್ಲಿ ಬಂದಿತು. ಲೋಕಾಯುಕ್ತರು ಅಂದೇ ತಮ್ಮ ಅಧಿಕಾರವನ್ನು ಸ್ವೀಕರಿಸಿದ್ದು, ಉಪಲೋಕಾಯುಕ್ತರು ದಿನಾಂಕ 22-1-1986 ರಂದು ಅಧಿಕಾರವನ್ನು ಸ್ವೀಕರಿಸಿದರು.

ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರು - ಈ ಇಬ್ಬರ ಸಂಬಂಧದಲ್ಲೂ ಅಪಮಾನಕ್ಕಾಗಿ ಶಿಕ್ಷೆಯ ಬಗೆಗಿನ ಉಪಬಂಧವೂ ಸೇರಿದಂತೆ ಅವಶ್ಯಕವಾದ ಕೆಲವು ತಿದ್ದುಪಡಿಗಳನ್ನು ಮಾಡಲು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಪತ್ರಿಕೆ) ಭಾಗ-4 ಸೆಕ್ಷನ್-2ಎ ದಿನಾಂಕ 5-2-1988 ನಂ.72 ರಲ್ಲಿದ್ದಂತೆ)

## V

**1991ರ ಅಧಿನಿಯಮ 30**.- ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 (1984ರ ಪ್ರಕರಣ 5(3)ರ ಪ್ರಕಾರ ಕರ್ನಾಟಕ ಲೋಕಾಯುಕ್ತ ಮತ್ತು ಉಪಲೋಕಾಯುಕ್ತರಿಗೆ ತಿಂಗಳಿಗೆ ರೂ.7,500 ಮತ್ತು ರೂ.6,000 ವೇತನವನ್ನು ನೀಡಲಾಗುತ್ತಿದೆ. ಭಾರತ ಸರ್ಕಾರವು ಸರ್ವೋಚ್ಚ ನ್ಯಾಯಾಲಯ, ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮತ್ತು ನ್ಯಾಯಾಧೀಶರ ವೇತನವನ್ನು ಹೆಚ್ಚಿಸಿದೆ. ಲೋಕಾಯುಕ್ತ ಮತ್ತು ಉಪಲೋಕಾಯುಕ್ತರ ವೇತನವನ್ನು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮತ್ತು ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ವೇತನಕ್ಕೆ ಸಮನಾಗಿ ಹೆಚ್ಚಿಸುವ ವಿಷಯ ಬಹಳ ದಿನಗಳಿಂದ ಸರ್ಕಾರದ ಪರಿಶೀಲನೆಯಲ್ಲಿ ಇತ್ತು. ಇದು ಬಹಳ ದಿನಗಳಿಂದ ಇತ್ಯರ್ಥವಾಗದೆ ಇರುವುದರಿಂದ ಸರ್ಕಾರವು ಈ ದಿಶೆಯಲ್ಲಿ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧ್ಯಾದೇಶ, 1991ನ್ನು ಹೊರಡಿಸಿದೆ. ಸದರಿ ಅಧ್ಯಾದೇಶವನ್ನು ಪ್ರತಿಸ್ಥಾಪಿಸಲು ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಪತ್ರಿಕೆ) ಭಾಗ-4 ಸೆಕ್ಷನ್-2ಎ ದಿನಾಂಕ 28-8-1991 ನಂ.566, ಪುಟ 40 ರಲ್ಲಿದ್ದಂತೆ)

****

## VI

**2010ರ ಅಧಿನಿಯಮ ಸಂಖ್ಯೆ 25**.- ಕರ್ನಾಟಕ ಲೋಕಾಯುಕ್ತರು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುವಂತೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ಕ್ಕೆ ಈ ಮುಂದಿನ ತಿದ್ದುಪಡಿಗಳನ್ನು ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ:-

(i) ಸರ್ಕಾರದ ಮುಖ್ಯ ಕಾರ್ಯದರ್ಶಿ, ಅಪರ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ ಅಥವಾ ಕಾರ್ಯದರ್ಶಿ-II ಇವರುಗಳನ್ನು "ಕಾರ್ಯದರ್ಶಿ" ಎಂಬ ಪದದ ಅರ್ಥವ್ಯಾಪ್ತಿಯೊಳಗೆ ಸೇರಿಸುವುದು;

(ii) ಮುಖ್ಯಮಂತ್ರಿ, ಸಚಿವರುಗಳು, ರಾಜ್ಯ ವಿಧಾನಮಂಡಲದ ಸದಸ್ಯರುಗಳು, ಮಂಡಲಿಗಳು, ನಿಗಮಗಳು, ಸರ್ಕಾರದ ಕಂಪನಿಗಳು, ಸಹಕಾರ ಸಂಘಗಳು ಮತ್ತು ಸಂಘಗಳಿಗೆ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಸದಸ್ಯನಾಗಿ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ಮಾಸಿಕವಾಗಿ ಇಪ್ಪತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚಿನ ನಿಗಧಿತ ವೇತನ, ಸಂಬಳ ಅಥವಾ ಗೌರವಧನ ಪಡೆಯುವ ಸಾರ್ವಜನಿಕ ನೌಕರರು ಕೈಗೊಂಡ ಕ್ರಮದ ಬಗ್ಗೆ ತಮ್ಮ ಅಭಿಪ್ರಾಯವನ್ನು ದಾಖಲಿಸಿ ತಾವಾಗಿಯೇ ವಿಚಾರಣೆ ನಡೆಸುವುದಕ್ಕೆ ಲೋಕಾಯುಕ್ತರಿಗೆ ಅಧಿಕಾರವನ್ನು ನೀಡುವುದು;

(iii) ಉಪಲೋಕಾಯುಕ್ತರ ಪದವು ಖಾಲಿ ಇದ್ದಾಗ, ಉಪಲೋಕಾಯುಕ್ತರ ಪ್ರಕಾರ್ಯಗಳನ್ನು ಲೋಕಾಯುಕ್ತರು ನಿರ್ವಹಿಸುವುದಕ್ಕೆ ಸಾಧ್ಯವಾಗುವಂತೆ ಮಾಡುವುದು ಮತ್ತು ಅದೇ ರೀತಿಯಾಗಿ ಲೋಕಾಯುಕ್ತರ ಪದವು ಖಾಲಿ ಇದ್ದಾಗ, ಲೋಕಾಯುಕ್ತರ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ, ಉಪಲೋಕಾಯುಕ್ತರಿಗೆ ಸಾಧ್ಯವಾಗುವಂತೆ ಮಾಡುವುದು;

(iv) ಬಾಧಿತ ವ್ಯಕ್ತಿಯ ಕಾನೂನುಬದ್ಧ ಪ್ರತಿನಿಧಿಗಳು ಫಿರ್ಯಾದನ್ನು ದಾಖಲು ಮಾಡಲು ಅಥವಾ ಈಗಾಗಲೇ ಫಿರ್ಯಾದನ್ನು ಮಾಡಲಾಗಿದ್ದರೆ, ಮುಂದುವರಿಸಲು ಅವಕಾಶ ಮಾಡಿಕೊಡುವುದು;

(v) ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರು, ಇತರೆ ಯಾವುದೇ ಏಜೆನ್ಸಿಯ ಎಂದರೆ ಯಾವೊಬ್ಬ ವ್ಯಕ್ತಿಯ, ಸೇವೆಯನ್ನು ಬಳಸಿಕೊಳ್ಳಬಹುದು. ಆದರೂ ಇದನ್ನು ಸ್ಪಷ್ಟ ಪಡಿಸುವ ಉದ್ದೇಶದಿಂದ ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರು ಯಾವೊಬ್ಬ ವ್ಯಕ್ತಿಯ ಸೇವೆಯನ್ನು ಸಹ ಬಳಸಿಕೊಳ್ಳಲು ತಿದ್ದುಪಡಿಯಲ್ಲಿ ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2010ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 25, ಕಡತ ಸಂಖ್ಯೆ. 30 ಶಾಸನ 2010)
(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 41ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

## VII

**2015ರ ಅಧಿನಿಯಮ ಸಂಖ್ಯೆ 35.–**

ಲೋಕಾಯುಕ್ತ ಸಂಸ್ಥೆಯಲ್ಲಿನ ಇತ್ತೀಚಿನ ಬೆಳವಣಿಗೆಯ ದೃಷ್ಟಿಯಿಂದ, ಎಂದರೆ;–

1.ಲೋಕಾಯುಕ್ತರ ಹಾಗೂ ಉಪ ಲೋಕಾಯುಕ್ತರ ನೇಮಕಾತಿಗೆ ಸಂಬಂಧಿಸಿದ ಅರ್ಹತಾ ಮಾನದಂಡಗಳನ್ನು ಪರಿಷ್ಕರಿಸುವುದಕ್ಕೆ;
2. ಲೋಕಾಯುಕ್ತರ ಅಥವಾ ಉಪ ಲೋಕಾಯುಕ್ತರ ಪದಚ್ಯುತಿಗೆ ಸಂಬಂಧಿಸಿದ ಕಾರ್ಯ ವಿಧಾನವನ್ನು ಪರಿಷ್ಕರಿಸುವುದಕ್ಕೆ;
3. ಲೋಕಾಯುಕ್ತನನ್ನು ಅಥವಾ ಉಪಲೋಕಾಯುಕ್ತನನ್ನು ಪದಚ್ಯುತಗೊಳಿಸುವ ಗೊತ್ತುವಳಿಯು ರಾಜ್ಯ ವಿಧಾನಮಂಡಲದ ಸದನದ ಅಥವಾ ಸದನಗಳ ಮುಂದೆ ಬಾಕಿ ಇರುವ ಅವಧಿಯಲ್ಲಿ ಆತನು ತನ್ನ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ಆತನನ್ನು ತಡೆಹಿಡಿಯುವುದಕ್ಕೆ;
4. ಲೋಕಾಯುಕ್ತರು ಪ್ರತಿವರ್ಷದ ವಾರ್ಷಿಕ ವರದಿಯನ್ನು ಅದೇ ವರ್ಷದ ಅಕ್ಟೋಬರ್ 31ರವರೆಗೆ ಸಲ್ಲಿಸಲು ಉಪಬಂಧವನ್ನು ಕಲ್ಪಿಸುವುದಕ್ಕೆ;

–ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ಕ್ಕೆ ತಿದ್ದುಪಡಿಗಳನ್ನು ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ 31:, ಕಡತ ಸಂಖ್ಯೆ:ಸಂವ್ಯಶಾಇ 40 ಶಾಸನ 2015)
(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 41ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

## VIII

**2020ರ ಅಧಿನಿಯಮ ಸಂಖ್ಯೆ 05.–** ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಯಾವುದೇ ಪ್ರಕರಣಗಳು ಅಥವಾ ದೂರುಗಳು ಅಥವಾ ವಿಷಯಗಳು ಮುಂತಾದವುಗಳನ್ನು ಆಲಿಸಲು ಅಥವಾ ಪರಿಗಣಿಸಲು ಅಥವಾ ಯಾವುದೇ ರೀತಿಯಲ್ಲಿ ವ್ಯವಹರಿಸಲು ಅಥವಾ ವಿಲೆಗೊಳಿಸಲು ಅಸಮರ್ಥನೆಂದು ಲೋಕಾಯುಕ್ತನು ಅಭಿಪ್ರಾಯ ಪಡುವ ಅಂಥ ಪ್ರಕರಣಗಳು ಅಥವಾ ದೂರುಗಳು ಅಥವಾ ವಿಷಯಗಳು ಮುಂತಾದವುಗಳಲ್ಲಿ ಯಾವುದೇ ಒಂದನ್ನು ಉಪ ಲೋಕಾಯುಕ್ತರಲ್ಲಿ ಯಾರೊಬ್ಬರಿಗೆ ಒಪ್ಪಿಸುವ ಮೂಲಕ ಅಥವಾ ವರ್ಗಾಯಿಸುವ ಮೂಲಕ ಕರ್ನಾಟಕ ಲೋಕಾಯುಕ್ತನನ್ನು ಹೆಚ್ಚು ಪರಿಣಾಮಕಾರಿಯಾಗಿ ಕರ್ತವ್ಯನಿರ್ವಹಿಸಲು ಸಮರ್ಥಗೊಳಿಸುವುಕ್ಕಾಗಿ ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ನ್ನು (1985ರ ಕರ್ನಾಟಕ ಅಧಿನಿಯಮ 4) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2020ರ ವಿಧಾನಸಭೆಯ ವಿಧೇಯಕ ಸಂಖ್ಯೆ: 01, ಕಡತ ಸಂಖ್ಯೆ: 28 ಶಾಸನ 2018]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 41ನೆಯ ನಮೂದನೆಯಡಿಯಲ್ಲಿ ಬರುತ್ತದೆ]
[ಕರ್ನಾಟಕ ರಾಜ್ಯ ಪತ್ರದ ಭಾಗ–IV ವಿಶೇಷ ಪತ್ರಿಕೆ ಸಂಖ್ಯೆ: 111 ದಿನಾಂಕ: 27.03.2020ರಲ್ಲಿ ಪ್ರಕಟಣೆಗೊಂಡಿದೆ]

## IX

**ಅಧಿನಿಯಮ ಸಂಖ್ಯೆ 2020ರ 36-** ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 ಗೆ (1985 ರ ಕರ್ನಾಟಕ ಅಧಿನಿಯಮ 4) ರಡಿಯಲ್ಲಿ,-

(ಎ) ಲೋಕಾಯುಕ್ತ ಅಥವಾ ಉಪಲೋಕಾಯುಕ್ತರ ಮೂಲಕ ಪ್ರಾರಂಭಿಕ ವಿಚಾರಣೆ ಅಥವಾ ತನಿಖೆಯನ್ನು ನಡೆಸಲು;

(ಬಿ) ಲೋಕಾಯುಕ್ತ ಅಥವಾ ಉಪಲೋಕಾಯುಕ್ತರ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ವರದಿಗಳನ್ನು ಸಲ್ಲಿಸಲು;

-ಬಾಕಿ ಕುಂದು ಕೊರತೆಗಳು ಅಥವಾ ದೂರುಗಳ ಶೀಘ್ರ ವಿಲೇವಾರಿಗಾಗಿ, ಕರ್ನಾಟಕ ಲೋಕಾಯುಕ್ತವನ್ನು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದನ್ನು ಸಾಧ್ಯವಾಗಿಸಲು ಸಮಯದ ಚೌಕಟ್ಟನ್ನು ಅಳವಡಿಸಲು ತಿದ್ದುಪಡಿ ಮಾಡುವುದು ಅವಶ್ಯಕವಾಗಿರುತ್ತದೆ.

ಆದ್ದರಿಂದ ಈ ವಿಧೇಯಕ.

[2020ರ ವಿಧಾನಸಭೆಯ ವಿಧೇಯಕ ಸಂಖ್ಯೆ: 30, ಕಡತ ಸಂಖ್ಯೆ: ಸಂವ್ಯಶಾಇ 44 ಶಾಸನ 2020]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 41ನೇಯ ನಮೂದನೆಯಡಿಯಲ್ಲಿ ಬರುತ್ತದೆ]
[ಕರ್ನಾಟಕ ರಾಜ್ಯ ಪತ್ರದ ಭಾಗ-IVA, ವಿಶೇಷ ಪತ್ರಿಕೆ ಸಂಖ್ಯೆ: 467 ದಿನಾಂಕ: 19.10.2020ರಲ್ಲಿ ಪ್ರಕಟಣೆಗೊಂಡಿದೆ]

**1985ರ ಕರ್ನಾಟಕ ಅಧಿನಿಯಮ ಸಂಖ್ಯೆ 4**

*(1985ರ ಫೆಬ್ರವರಿ 11ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

**ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984**

*(1985ರ ಜನವರಿ 16ನೇ ದಿನಾಂಕದಂದು ರಾಷ್ಟ್ರಪತಿಯವರ ಅನುಮತಿ ಪಡೆಯಲಾಗಿದೆ)*

(1986ರ 15, 1986ರ 31, 1988ರ 1 1991ರ 30, 2010ರ 25, 2015ರ 35, 2020ರ 05 ಮತ್ತು 2020 ರ 36ನೇ ಅಧಿನಿಯಮಗಳಲ್ಲಿ ತಿದ್ದುಪಡಿಯಾದಂತೆ)

ಕರ್ನಾಟಕ ಸರ್ಕಾರದಿಂದ ಅಥವಾ ಅದರ ಪರವಾಗಿ ಅಥವಾ ಕರ್ನಾಟಕ ರಾಜ್ಯದಲ್ಲಿರುವ ಕೆಲವು ಸಾರ್ವಜನಿಕ ಪ್ರಾಧಿಕಾರಗಳಿಂದ ಅಥವಾ ಅವುಗಳ ಪರವಾಗಿ ಕೆಲವೊಂದು ಸಂದರ್ಭಗಳಲ್ಲಿ ಕೈಗೊಂಡ, ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ 2 ಅಥವಾ ಪಟ್ಟಿ 3ರಲ್ಲಿ ನಿರ್ದಿಷ್ಟಪಡಿಸಲಾದ ವಿಷಯಗಳಿಗೆ ಸಂಬಂಧಪಡಬಹುದಾದ ಆಡಳಿತಾತ್ಮಕ ಕ್ರಮದ (ಅಂಥ ಕ್ರಮಕ್ಕೆ ಸಂಬಂಧಪಟ್ಟಂತೆ ಅಥವಾ ಅದರಿಂದುಟಾಗುವ ಯಾವುದೇ ಲೋಪ ಮತ್ತು ನೆರವೇರಿಕೆಯೂ ಸೇರಿದಂತೆ) ವಿಚಾರಣೆ ನಡೆಸುವುದಕ್ಕಾಗಿ ಕೆಲವು ಪ್ರಾಧಿಕಾರಗಳ ನೇಮಕಾತಿ ಮತ್ತು ಅವುಗಳ ಪ್ರಕಾರ್ಯಗಳಿಗೆ ಮತ್ತು ಅವುಗಳಿಗೆ ಸಂಬಂಧಪಟ್ಟ ಅಥವಾ ಅವುಗಳಿಗೆ ಆನುಷಂಗಿಕವಾದ ಉಪಬಂಧ ಕಲ್ಪಿಸುವುದಕ್ಕಾಗಿ ಒಂದು ಅಧಿನಿಯಮ.

ಕರ್ನಾಟಕ ಸರ್ಕಾರದಿಂದ ಅಥವಾ ಅದರ ಪರವಾಗಿ ಅಥವಾ ಕರ್ನಾಟಕ ರಾಜ್ಯದಲ್ಲಿರುವ ಕೆಲವು ಸಾರ್ವಜನಿಕ ಪ್ರಾಧಿಕಾರಗಳಿಂದ ಅಥವಾ ಅವುಗಳ ಪರವಾಗಿ ಕೆಲವೊಂದು ಸಂದರ್ಭಗಳಲ್ಲಿ ಕೈಗೊಂಡ, ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ 2 ಅಥವಾ ಪಟ್ಟಿ 3ರಲ್ಲಿ ನಿರ್ದಿಷ್ಟಪಡಿಸಲಾದ ವಿಷಯಗಳಿಗೆ ಸಂಬಂಧಪಡಬಹುದಾದ ಆಡಳಿತಾತ್ಮಕ ಕ್ರಮದ (ಅಂಥ ಕ್ರಮಕ್ಕೆ ಸಂಬಂಧಪಟ್ಟಂತೆ ಅಥವಾ ಅದರಿಂದುಂಟಾಗುವ ಯಾವುದೇ ಲೋಪ ಮತ್ತು ನೆರವೇರಿಕೆಯೂ ಸೇರಿದಂತೆ) ವಿಚಾರಣೆ ನಡೆಸುವುದಕ್ಕಾಗಿ ಕೆಲವು ಪ್ರಾಧಿಕಾರಗಳ ನೇಮಕಾತಿ ಮತ್ತು ಅವುಗಳ ಪ್ರಕಾರ್ಯಗಳಿಗೆ ಮತ್ತು ಅವುಗಳಿಗೆ ಸಂಬಂಧಪಟ್ಟ ಅಥವಾ ಅವುಗಳಿಗೆ ಆನುಷಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಮೂವತ್ತನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಗೊತ್ತುಪಡಿಸಬಹುದಾದಂಥ [1][ದಿನಾಂಕದಂದು][1] ಜಾರಿಯಲ್ಲಿ ಬರತಕ್ಕದ್ದು.

1. ಅಧಿನಿಯಮವು ಅಧಿಸೂಚನೆ ಮೂಲಕ ದಿನಾಂಕ: 15.01.1986ರಿಂದ ಜಾರಿಗೆ ಬಂದಿದೆ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸುವ ಹೊರತು,-

(1) "ಕ್ರಮ" ಎಂದರೆ ನಿರ್ಧಾರ, ಶಿಫಾರಸು ಅಥವಾ ನಿರ್ಣಯ ರೂಪದಲ್ಲಿ ಅಥವಾ ಇತರ ಯಾವುದೇ ರೀತಿಯಲ್ಲಿ ಕೈಗೊಂಡ ಆಡಳಿತಾತ್ಮಕ ಕ್ರಮ ಮತ್ತು ಕ್ರಮ ಕೈಗೊಳ್ಳಲು ಉದ್ದೇಶಪೂರ್ವಕವಾಗಿ ತಪ್ಪುವುದನ್ನು ಅಥವಾ ಲೋಪ ಮಾಡುವುದನ್ನು ಒಳಗೊಳ್ಳುತ್ತದೆ ಮತ್ತು ಅಂಥ ಕ್ರಮಕ್ಕೆ [1][ಸಂಬಂಧಿಸುವ][1] ಇತರ ಎಲ್ಲಾ ಪದ ಪ್ರಯೋಗಗಳನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

(2) ಸಾರ್ವಜನಿಕ ನೌಕರನ ಸಂಬಂಧದಲ್ಲಿ "ಆಪಾದನೆ" ಎಂದರೆ, ಅಂಥ ಸಾರ್ವಜನಿಕ ನೌಕರನು,-

(ಎ) ತನಗೆ ಅಥವಾ ಇತರ ಯಾವೊಬ್ಬ ವ್ಯಕ್ತಿಗೆ ಯಾವುದೇ ಲಾಭ ಅಥವಾ ಅನುಕೂಲ ದೊರಕಿಸಿಕೊಳ್ಳಲು ಅಥವಾ ಇತರ ಯಾವೊಬ್ಬ ವ್ಯಕ್ತಿಗೆ ಅನುಚಿತ ಹಾನಿ ಅಥವಾ ತೊಂದರೆಯನ್ನುಂಟು ಮಾಡಲು ಅಂಥ ಸಾರ್ವಜನಿಕ ನೌಕರನಾಗಿ ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದಾನೆ;

(ಬಿ) ಅಂಥ ಸಾರ್ವಜನಿಕ ನೌಕರನಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ವೈಯಕ್ತಿಕ ಹಿತಾಸಕ್ತಿಯಿಂದ ಅಥವಾ ಅನುಚಿತ ಅಥವಾ ಭ್ರಷ್ಟ ಪ್ರೇರಣೆಗಳಿಂದ ಪ್ರಚೋದಿತನಾಗಿದ್ದಾನೆ;

(ಸಿ) ಅಂಥ ಸಾರ್ವಜನಿಕ ನೌಕರನಾಗಿ ತನ್ನ ಸ್ಥಾನದಲ್ಲಿ ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ ಅಥವಾ ನೀತಿನಿಷ್ಠೆಯ ಕೊರತೆಯಿಂದ ದೋಷಿಯಾಗಿದ್ದಾನೆ; ಅಥವಾ

(ಡಿ) ಅವನು ಯಾವ ವರ್ಗಕ್ಕೆ ಸೇರುವನೋ ಆ ವರ್ಗದ ಸಾರ್ವಜನಿಕ ನೌಕರರು ಅನುಸರಿಸಲೇಬೇಕಾದ ನೀತಿನಿಷ್ಠೆಯ ಮತ್ತು ನಡತೆಗಳ ಸೂತ್ರ ಪ್ರಮಾಣಗಳಿಗನುಸಾರವಾಗಿ ಕಾರ್ಯನಿರ್ವಹಿಸಲು ತಪ್ಪಿದ್ದಾನೆ;

– ಎಂಬ ಯಾವುದೇ ಸ್ಥಿರೀಕರಣ

(3) "ಮುಖ್ಯ ಮಂತ್ರಿ" ಎಂದರೆ ಕರ್ನಾಟಕದ ಮುಖ್ಯ ಮಂತ್ರಿ;

(4) ಸಾರ್ವಜನಿಕ ನೌಕರನ ಸಂಬಂಧದಲ್ಲಿ, "ಸಕ್ಷಮ ಪ್ರಾಧಿಕಾರ" ಎಂದರೆ,-

(ಎ) ಮುಖ್ಯ ಮಂತ್ರಿ ಅಥವಾ ರಾಜ್ಯ ವಿಧಾನಮಂಡಲದ ಒಬ್ಬ ಸದಸ್ಯನ ಸಂದರ್ಭದಲ್ಲಿ, ತನ್ನ ವಿವೇಚನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯಪಾಲ;

(ಬಿ) ಒಬ್ಬ ಮಂತ್ರಿ ಅಥವಾ ಕಾರ್ಯದರ್ಶಿಯ ಸಂದರ್ಭದಲ್ಲಿ, ಮುಖ್ಯಮಂತ್ರಿ;

(ಸಿ) ಕಾರ್ಯದರ್ಶಿಯಲ್ಲದ ಇತರ ಸರ್ಕಾರಿ ನೌಕರನ ಸಂಬಂಧದಲ್ಲಿ ಕರ್ನಾಟಕ ಸರ್ಕಾರ;

(ಡಿ) ಇತರ ಯಾವೊಬ್ಬ ಸಾರ್ವಜನಿಕ ನೌಕರನ ಸಂದರ್ಭದಲ್ಲಿ, ನಿಯಮಿಸಬಹುದಾದಂಥ ಪ್ರಾಧಿಕಾರ;

(5) "ಭ್ರಷ್ಟಾಚಾರ" ಎನ್ನುವುದರಲ್ಲಿ ಭಾರತ ದಂಡ ಸಂಹಿತೆಯ 9ನೇ ಅಧ್ಯಾಯದ ಮೇರೆಗೆ ಅಥವಾ ಭ್ರಷ್ಟಾಚಾರ ನಿವಾರಣಾ ಅಧಿನಿಯಮ, 1947ರ ಮೇರೆಗೆ, ದಂಡನೀಯವಾದ ಯಾವುದನ್ನೂ ಒಳಗೊಳ್ಳುತ್ತದೆ;

(6) "ಸರ್ಕಾರಿ ನೌಕರ" ಎಂದರೆ ಕರ್ನಾಟಕ ರಾಜ್ಯದ ಸಿವಿಲ್ ಸೇವೆಗಳ ಸದಸ್ಯನಾಗಿರುವ ಅಥವಾ ಕರ್ನಾಟಕ ರಾಜ್ಯದ ವ್ಯವಹಾರಗಳ ಸಂಬಂಧದಲ್ಲಿ ಸಿವಿಲ್ ಹುದ್ದೆಯನ್ನು ಧಾರಣ ಮಾಡಿರುವ ಅಥವಾ ಸೇವೆ ಸಲ್ಲಿಸುತ್ತಿರುವ ವ್ಯಕ್ತಿ ಮತ್ತು ಇದರಲ್ಲಿ ಯಾರ ಸೇವೆಯನ್ನು ಭಾರತ ಸರ್ಕಾರಕ್ಕೆ, ಇತರ ರಾಜ್ಯ ಸರ್ಕಾರಕ್ಕೆ, ನಿಗಮಿತವಾಗಿರುವ ಅಥವಾ ನಿಗಮಿತವಾಗಿಲ್ಲದ ಒಂದು ಸ್ಥಳೀಯ ಪ್ರಾಧಿಕಾರ ಅಥವಾ ವ್ಯಕ್ತಿಗೆ ತಾತ್ಕಾಲಿಕವಾಗಿ ವಹಿಸಿಕೊಡಲಾಗಿದೆಯೋ ಅಂಥ ಯಾವೊಬ್ಬ ವ್ಯಕ್ತಿ ಮತ್ತು ಕೇಂದ್ರ ಸರ್ಕಾರದ ಅಥವಾ ಇತರ ಯಾವುದೇ ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಸೇವೆಯಲ್ಲಿರುವ ಯಾವ ವ್ಯಕ್ತಿಯ ಸೇವೆಯನ್ನು ಕರ್ನಾಟಕ ಸರ್ಕಾರಕ್ಕೆ ತಾತ್ಕಾಲಿಕವಾಗಿ ವಹಿಸಿಕೊಡಲಾಗಿದೆಯೋ ಆ ವ್ಯಕ್ತಿಯೂ ಒಳಗೊಳ್ಳುತ್ತಾನೆ;

(7) "ರಾಜ್ಯಪಾಲ" ಎಂದರೆ, ಕರ್ನಾಟಕ ರಾಜ್ಯಪಾಲ;

(8) "ದೂರು" ಎಂದರೆ, ದುರಾಡಳಿತದ ಪರಿಣಾಮವಾಗಿ ತಾನು ಅನ್ಯಾಯ ಅಥವಾ ಅನುಚಿತ ತೊಂದರೆಗೆ ಒಳಗಾಗಿದ್ದೇನೆಂದು ಒಬ್ಬ ವ್ಯಕ್ತಿಯು ಮಾಡುವ ಕ್ಲೇಮು;

(9) "ಲೋಕಾಯುಕ್ತ" ಎಂದರೆ 3ನೇ ಪ್ರಕರಣದ ಮೇರೆಗೆ ಲೋಕಾಯುಕ್ತನಾಗಿ ನೇಮಿತನಾದ ಒಬ್ಬ ವ್ಯಕ್ತಿ;

(10) "ದುರಾಡಳಿತ" ಎಂದರೆ ಯಾವುದೇ ಸಂದರ್ಭದಲ್ಲಿ,-

(ಎ) ಕ್ರಮ ಅಥವಾ ಅಂಥ ಕ್ರಮಕ್ಕೆ ಸಂಬಂಧಿಸಿದ ಆಡಳಿತ ವಿಧಾನ ಅಥವಾ ಅಂಥ ಕ್ರಮವನ್ನು ನಿಯಂತ್ರಿಸುವ ಪದ್ಧತಿ ಅಸಮಂಜಸವಾಗಿದ್ದರೆ, ನ್ಯಾಯ ಪೂರ್ಣವಾಗಿಲ್ಲದಿದ್ದರೆ, ದಬ್ಬಾಳಿಕೆಯಿಂದ ಕೂಡಿದ್ದರೆ ಅಥವಾ ಅನುಚಿತ ತಾರತಮ್ಯ ತೋರುವಂತಿದ್ದರೆ; ಅಥವಾ

(ಬಿ) ಅಂಥ ಕ್ರಮವನ್ನು ಕೈಗೊಳ್ಳುವಲ್ಲಿ ಉದ್ದೇಶಪೂರ್ವಕ ನಿರ್ಲಕ್ಷ್ಯ ಅಥವಾ ಅನುಚಿತ ವಿಳಂಬವಾಗಿದ್ದರೆ ಅಥವಾ ಅಂಥ ಕ್ರಮವನ್ನು ನಿಯಂತ್ರಿಸುವ ಆಡಳಿತ ವಿಧಾನ ಅಥವಾ ಪದ್ಧತಿ ಅನುಚಿತ ವಿಳಂಬದಿಂದ ಕೂಡಿದ್ದರೆ,

ಹಾಗೆ ಆಡಳಿತ ಪ್ರಕಾರ್ಯಗಳ ಜಾರಿಯಲ್ಲಿ ಕೈಗೊಂಡ ಕ್ರಮ ಅಥವಾ ಕೈಗೊಂಡಿರುವುದಾಗಿ ತಾತ್ಪರ್ಯವಾಗುವ ಕ್ರಮ;

(11) "ಮಂತ್ರಿ" ಎಂದರೆ ಮುಖ್ಯ ಮಂತ್ರಿಯನ್ನು ಹೊರತುಪಡಿಸಿ ಕರ್ನಾಟಕ ರಾಜ್ಯದ ಮಂತ್ರಿ ಮಂಡಲದ ಸದಸ್ಯ;

(12) "ಸಾರ್ವಜನಿಕ ನೌಕರ" ಎಂದರೆ ಯಾವುದೇ ಕಾಲದಲ್ಲಿ,-

(ಎ) ಮುಖ್ಯ ಮಂತ್ರಿಯಾಗಿರುವ ಅಥವಾ ಮುಖ್ಯ ಮಂತ್ರಿಯಾಗಿದ್ದ;

(ಬಿ) ಮಂತ್ರಿಯಾಗಿರುವ ಅಥವಾ ಮಂತ್ರಿಯಾಗಿದ್ದ;

(ಸಿ) ರಾಜ್ಯ ವಿಧಾನಮಂಡಲದ ಸದಸ್ಯರಾಗಿರುವ ಅಥವಾ ಸದಸ್ಯನಾಗಿದ್ದ;

(ಡಿ) ಸರ್ಕಾರಿ ನೌಕರನಾಗಿರುವ ಅಥವಾ ಸರ್ಕಾರಿ ನೌಕರನಾಗಿದ್ದ;

(ಇ) ಒಂದು ಸಹಕಾರ ಸಂಘ ಅಥವಾ ಕಂಪನಿಗಳ ಅಧಿನಿಯಮ, 1956ರ 617ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಕಂಪನಿ ಮತ್ತು ರಾಜ್ಯ ಸರ್ಕಾರವು ನಿಗಮಗಳು ಅಥವಾ

ಮಂಡಲಿಗಳಲ್ಲಿ ತನಗಿರುವ ಆರ್ಥಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಆಗಿಂದಾಗ್ಗೆ ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅಂಥ ಇತರ ನಿಗಮಗಳು ಅಥವಾ ಮಂಡಲಿಗಳು ಸೇರಿದಂತೆ ರಾಜ್ಯ ವಿಧಾನಮಂಡಲದ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ರಚಿತವಾದ ಕರ್ನಾಟಕ ರಾಜ್ಯದಲ್ಲಿನ ಸ್ಥಳೀಯ ಪ್ರಾಧಿಕಾರದ ಅಥವಾ ಶಾಸನಬದ್ಧ ಮಂಡಲಿ ಅಥವಾ ನಿಗಮದ (ಯಾವುದೇ ಹೆಸರಿನಿಂದ ಕರೆಯಲಾಗುವ) ಅಧ್ಯಕ್ಷ ಮತ್ತು ಉಪಾಧ್ಯಕ್ಷ ಅಥವಾ ಸದಸ್ಯನಾಗಿರುವ ಅಥವಾ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಅಥವಾ ಸದಸ್ಯನಾಗಿದ್ದ;

(ಎಫ್) ರಾಜ್ಯ ಸರ್ಕಾರದಿಂದ ರಚಿತವಾದ ಶಾಸನ ಬದ್ಧವಾದ ಅಥವಾ ಶಾಸನ ಬದ್ಧವಲ್ಲದ ಸಮಿತಿಯ ಅಥವಾ ಮಂಡಲಿಯ ಸದಸ್ಯನಾಗಿರುವ ಅಥವಾ ಸದಸ್ಯನಾಗಿದ್ದ

– ಒಬ್ಬ ವ್ಯಕ್ತಿ;

(ಜಿ) ಈ ಕೆಳಗಿನವುಗಳಲ್ಲಿ, ಎಂದರೆ,-

(i) ಕರ್ನಾಟಕ ರಾಜ್ಯದಲ್ಲಿನ ಸ್ಥಳೀಯ ಪ್ರಾಧಿಕಾರ;

(ii) ರಾಜ್ಯ ಅಥವಾ ಕೇಂದ್ರ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾಗಿದ್ದು, ರಾಜ್ಯ ಸರ್ಕಾರದ ಸ್ವಾಮ್ಯ ಅಥವಾ ನಿಯಂತ್ರಣದಲ್ಲಿರುವ ಶಾಸನಬದ್ಧ ನಿಕಾಯ ಅಥವಾ ನಿಗಮ (ಸ್ಥಳೀಯ ಪ್ರಾಧಿಕಾರವಾಗಿರದ) ಹಾಗೂ ರಾಜ್ಯ ಸರ್ಕಾರವು ತನಗಿರುವ ಆರ್ಥಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಆಗಿಂದಾಗ್ಗೆ ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ಮಂಡಲಿ ಅಥವಾ ನಿಗಮ;

(iii) ಕಂಪನಿಗಳ ಅಧಿನಿಯಮ, 1956ರ ಮೇರೆಗೆ ನೋಂದಾಯಿತವಾಗಿದ್ದು, ಅದರಲ್ಲಿ, ರಾಜ್ಯ ಸರ್ಕಾರವು ಪೂರ್ಣ ಸಂದಾಯವಾದ ಷೇರುಬಂಡವಾಳದಲ್ಲಿ ಶೇಕಡಾ ಐವತ್ತೊಂದಕ್ಕಿಂತ ಕಡಿಮೆಯಿಲ್ಲದಷ್ಟನ್ನು ಹೊಂದಿರುವ ಕಂಪನಿ ಅಥವಾ ಅಂಥ ಕಂಪನಿಗೆ ಅಧೀನವಾದ ಯಾವುದೇ ಕಂಪನಿ;

(iv) ರಾಜ್ಯ ಸರ್ಕಾರದ ನಿಯಂತ್ರಣಕ್ಕೊಳಪಟ್ಟಿರುವ ಮತ್ತು ಸರ್ಕಾರಿ ರಾಜ್ಯ ಪತ್ರದಲ್ಲಿ ಈ ಸಂಬಂಧದಲ್ಲಿ ಅಧಿಸೂಚಿತವಾಗಿರುವ, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಮೇರೆಗೆ ನೋಂದಾಯಿತವಾದ ಅಥವಾ ನೋಂದಾಯಿತವಾಗಿದೆ ಎಂದು ಭಾವಿಸಲಾದ ಒಂದು ಸಂಘ;

(v) ಒಂದು ಸಹಕಾರಿ ಸಂಘ;

(vi) ಒಂದು ವಿಶ್ವವಿದ್ಯಾನಿಲಯ;

ಇವುಗಳಲ್ಲಿ ಸೇವೆಮಾಡುವ ಅಥವಾ ವೇತನ ಪಡೆಯುವ ಒಬ್ಬ ವ್ಯಕ್ತಿ;

***ವಿವರಣೆ.***– ಈ ಖಂಡದಲ್ಲಿ "ಸಹಕಾರಿ ಸಂಘ" ಎಂದರೆ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959ರ ಮೇರೆಗೆ ನೋಂದಾಯಿತವಾದ ಅಥವಾ ನೋಂದಾಯಿತವಾಗಿರುವುದಾಗಿ ಭಾವಿಸಲಾದ ಸಹಕಾರಿ ಸಂಘ ಮತ್ತು "ವಿಶ್ವವಿದ್ಯಾನಿಲಯ" ಎಂದರೆ ರಾಜ್ಯ ವಿಧಾನಮಂಡಲದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಅಥವಾ ಸ್ಥಾಪಿತವಾಗಿರುವುದಾಗಿ ಭಾವಿಸಲಾದ ವಿಶ್ವವಿದ್ಯಾನಿಲಯ;

(13) "ಕಾರ್ಯದರ್ಶಿ" [1][ಎಂದರೆ, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ, ಅಪರ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ ಅಥವಾ ಕಾರ್ಯದರ್ಶಿ–II][1] ಮತ್ತು ಇದರಲ್ಲಿ ವಿಶೇಷ ಕಾರ್ಯದರ್ಶಿ, ಒಬ್ಬ ಅಪರ ಕಾರ್ಯದರ್ಶಿ ಮತ್ತು ಒಬ್ಬ ಸಹ ಕಾರ್ಯದರ್ಶಿಯನ್ನು ಒಳಗೊಳ್ಳುತ್ತದೆ;

(14) "ಉಪಲೋಕಾಯುಕ್ತ" ಎಂದರೆ, 3ನೇ ಪ್ರಕರಣದ ಮೇರೆಗೆ ಉಪಲೋಕಾಯುಕ್ತನಾಗಿ ನೇಮಿತನಾದ ವ್ಯಕ್ತಿ.

1. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 23.07.2010ರಿಂದ ಪ್ರತಿಯೋಜಿಸಲಾಗಿದೆ.

**3. ಲೋಕಾಯುಕ್ತ ಮತ್ತು ಉಪಲೋಕಾಯುಕ್ತರ ನೇಮಕ.**– (1) ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ತನಿಖೆಗಳನ್ನು ಮತ್ತು ವಿಚಾರಣೆಗಳನ್ನು ನಡೆಸುವ ಉದ್ದೇಶಕ್ಕಾಗಿ, ರಾಜ್ಯಪಾಲರು ಲೋಕಾಯುಕ್ತನೆಂದು ಕರೆಯಲಾಗುವ ಒಬ್ಬ ವ್ಯಕ್ತಿಯನ್ನು ಮತ್ತು ಉಪಲೋಕಾಯುಕ್ತ ಅಥವಾ ಉಪಲೋಕಾಯುಕ್ತರುಗಳೆಂದು ಕರೆಯಲಾಗುವ ಒಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನು ನೇಮಕ ಮಾಡತಕ್ಕದ್ದು.

(2) (ಎ) ಒಬ್ಬ ವ್ಯಕ್ತಿ ಲೋಕಾಯುಕ್ತನಾಗಿ ನೇಮಿತನಾಗಬೇಕಾದರೆ ಅವನು ಸರ್ವೋಚ್ಚನ್ಯಾಯಾಲಯದ ಒಬ್ಬ ನ್ಯಾಯಾಧೀಶನಾಗಿ ಅಥವಾ ಒಂದು ಉಚ್ಛನ್ಯಾಯಾಲಯದ ಮುಖ್ಯ ನ್ಯಾಯಾಧೀಶನಾಗಿ ಪದಧಾರಣೆ ಮಾಡಿದ್ದಂಥ [1][ಅಥವಾ ಹತ್ತು ವರ್ಷಗಳಿಗೆ ಕಡಿಮೆ ಇಲ್ಲದಂತೆ ಉಚ್ಛ ನ್ಯಾಯಾಲಯದ ನ್ಯಾಯಾಧೀಶನಾಗಿ ಪದಧಾರಣೆ ಮಾಡಿದ್ದಂಥ][1] ವ್ಯಕ್ತಿಯಾಗಿರತಕ್ಕದ್ದು ಮತ್ತು ಮುಖ್ಯಮಂತ್ರಿಯು ಕರ್ನಾಟಕ ರಾಜ್ಯದ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ, ಕರ್ನಾಟಕ ವಿಧಾನ ಸಭೆಯ ಅಧ್ಯಕ್ಷ, ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕ ಮತ್ತು ಕರ್ನಾಟಕ ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕರ ಜೊತೆ ಸಮಾಲೋಚನೆ ನಡೆಸಿ ನೀಡಿದ ಸಲಹೆಯ ಮೇಲೆ ನೇಮಿತನಾಗತಕ್ಕದ್ದು.

(ಬಿ) ಒಬ್ಬ ವ್ಯಕ್ತಿ ಉಪಲೋಕಾಯುಕ್ತನಾಗಿ ನೇಮಿತನಾಗಬೇಕಾದರೆ ಅವನು ಒಂದು ಉಚ್ಛ ನ್ಯಾಯಾಲಯದ ನ್ಯಾಯಾಧೀಶನಾಗಿ [1][ಐದು ವರ್ಷಗಳಿಗೆ ಕಡಿಮೆ ಇಲ್ಲದಂತೆ][1] ಪದಧಾರಣೆ ಮಾಡಿದ್ದಂಥ ವ್ಯಕ್ತಿಯಾಗಿರತಕ್ಕದ್ದು ಮತ್ತು ಮುಖ್ಯಮಂತ್ರಿಯು ಕರ್ನಾಟಕ ರಾಜ್ಯದ ಉಚ್ಛನ್ಯಾಯಾಲಯದ ಮುಖ್ಯ ನ್ಯಾಯಾಧೀಶ, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ, ಕರ್ನಾಟಕ ವಿಧಾನ ಸಭೆಯ ಅಧ್ಯಕ್ಷ, ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕ ಮತ್ತು ಕರ್ನಾಟಕ ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕರ ಜೊತೆ ಸಮಾಲೋಚನೆ ನಡೆಸಿ ನೀಡಿದ ಸಲಹೆಯ ಮೇಲೆ ನೇಮಿತನಾಗತಕ್ಕದ್ದು.

(ಸಿ) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಾಗಿ ನೇಮಿತನಾದ ವ್ಯಕ್ತಿಯು ತನ್ನ ಪದವನ್ನು ಧಾರಣ ಮಾಡುವ ಮೊದಲು, ರಾಜ್ಯಪಾಲರ ಅಥವಾ ಈ ಸಂಭಂಧದಲ್ಲಿ ಅವರು ನೇಮಕ ಮಾಡಿದ ಯಾವನಾದರೂ ವ್ಯಕ್ತಿಯ ಎದುರಿನಲ್ಲಿ ಪ್ರಮಾಣ ವಚನವನ್ನು ಅಥವಾ ಪ್ರತಿಜ್ಞೆಯನ್ನು ಮೊದಲನೇ ಅನುಸೂಚಿಯಲ್ಲಿ ಆ ಉದ್ದೇಶಕ್ಕಾಗಿ ನಿರೂಪಿತವಾದ ನಮೂನೆಯಲ್ಲಿ ಮಾಡತಕ್ಕದ್ದು ಮತ್ತು ಬರೆದುಕೊಡತಕ್ಕದ್ದು.

1. 2015ರ ಅಧಿನಿಯಮ ಸಂಖ್ಯೆ: 35ರ ಮೂಲಕ ದಿನಾಂಕ: 25.08.2015ರಿಂದ ಸೇರಿಸಲಾಗಿದೆ.

**4. ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಇತರ ಯಾವುದೇ ಪದವನ್ನು ಧಾರಣ ಮಾಡತಕ್ಕದ್ದಲ್ಲ.–** ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಸಂಸತ್ತಿನ ಸದಸ್ಯನಾಗಿರತಕ್ಕದ್ದಲ್ಲ ಅಥವಾ ಯಾವುದೇ ರಾಜ್ಯದ ವಿಧಾನ ಮಂಡಲದ ಸದಸ್ಯನಾಗಿರತಕ್ಕದ್ದಲ್ಲ ಮತ್ತು (ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಾಗಿ ತನ್ನ ಪದದ ಹೊರತು) ಯಾವುದೇ ನ್ಯಾಸದ ಅಥವಾ ಲಾಭದ ಪದವನ್ನು ಧಾರಣ ಮಾಡತಕ್ಕದ್ದಲ್ಲ. ಅಥವಾ ಯಾವುದೇ ರಾಜಕೀಯ ಪಕ್ಷದೊಡನೆ ಸಂಬಂಧ ಹೊಂದಿರತಕ್ಕದ್ದಲ್ಲ ಅಥವಾ ಯಾವುದೇ ವ್ಯಾಪಾರ ನಿರ್ವಹಿಸತಕ್ಕದ್ದಲ್ಲ ಅಥವಾ ಯಾವುದೇ ವೃತ್ತಿಯನ್ನು ನಡೆಸತಕ್ಕದ್ದಲ್ಲ ಮತ್ತು ತದನುಸಾರವಾಗಿ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಾಗಿ ನೇಮಿತನಾದ ವ್ಯಕ್ತಿಯು ತನ್ನ ಪದಧಾರಣ ಮಾಡುವ ಮುಂಚೆ,–

(ಎ) ಸಂಸತ್ತಿನ ಅಥವಾ ಯಾವುದೇ ರಾಜ್ಯದ ವಿಧಾನಮಂಡಲದ ಸದಸ್ಯನಾಗಿದ್ದರೆ ಅಂಥ ಸದಸ್ಯತ್ವಕ್ಕೆ ರಾಜೀನಾಮೆ ಕೊಡತಕ್ಕದ್ದು; ಅಥವಾ

(ಬಿ) ನ್ಯಾಸದ ಅಥವಾ ಲಾಭದ ಯಾವುದೇ ಪದವನ್ನು ಧಾರಣ ಮಾಡಿದ್ದರೆ ಅಂಥ ಪದಕ್ಕೆ ರಾಜೀನಾಮೆ ಕೊಡತಕ್ಕದ್ದು; ಅಥವಾ

(ಸಿ) ಯಾವುದೇ ರಾಜಕೀಯ ಪಕ್ಷದೊಡನೆ ಸಂಬಂಧವಿರಿಸಿಕೊಂಡಿದ್ದರೆ ಅದರೊಡನೆ ಸಂಬಂಧವನ್ನು ಕಡಿದುಕೊಳ್ಳತಕ್ಕದ್ದು; ಅಥವಾ

(ಡಿ) ಯಾವುದೇ ವ್ಯಾಪಾರವನ್ನು ನಿರ್ವಹಿಸುತ್ತಿದ್ದರೆ, ಅಂಥ ವ್ಯಾಪಾರದ ನಡೆಸುವಿಕೆ ಮತ್ತು ನಿರ್ವಹಣೆಯೊಂದಿಗೆ ತನಗಿರುವ ಸಂಬಂಧವನ್ನು, (ತನ್ನ ಸ್ವಾಮ್ಯವನ್ನು ತ್ಯಜಿಸುವುದೊಂದನ್ನು ಬಿಟ್ಟು) ಕಡಿದುಕೊಳ್ಳತಕ್ಕದ್ದು; ಅಥವಾ

(ಇ) ಯಾವುದೇ ವೃತ್ತಿಯನ್ನು ನಡೆಸುತ್ತಿದ್ದರೆ ಅಂಥ ವೃತ್ತಿ ನಡೆಸುವುದನ್ನು ನಿಲಂಬನಗೊಳಿಸತಕ್ಕದ್ದು.

**5. ಲೋಕಾಯುಕ್ತ ಮತ್ತು ಉಪಲೋಕಾಯುಕ್ತನ ಪದಾವಧಿ ಮತ್ತು ಇತರ ಸೇವಾ ಷರತ್ತುಗಳು.–** (1) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಾಗಿ ನೇಮಿತನಾದ ಒಬ್ಬ ವ್ಯಕ್ತಿ, ತನ್ನ ಪದವನ್ನು ಧಾರಣ ಮಾಡಿದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು:

ಪರಂತು,–

(ಎ) ಲೋಕಾಯುಕ್ತ ಅಥವಾ ಒಬ್ಬ ಉಪಲೋಕಾಯುಕ್ತನು ತನ್ನ ಹಸ್ತಾಧೀನ ಲೇಖದ ಮೂಲಕ ರಾಜ್ಯಪಾಲರಿಗೆ ಪತ್ರ ಬರೆದು ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು;

(ಬಿ) 6ನೇ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನನ್ನು ಆ ಪದದಿಂದ ತೆಗೆದುಹಾಕಬಹುದು.

(2) ಲೋಕಾಯುಕ್ತ ಅಥವಾ ಒಬ್ಬ ಉಪಲೋಕಾಯುಕ್ತನು ಪದಧಾರಣ ಮಾಡುವುದು ಸಮಾಪ್ತವಾದ ಮೇಲೆ ಕರ್ನಾಟಕ ಸರ್ಕಾರದಲ್ಲಿ ಅಥವಾ 2ನೇ ಪ್ರಕರಣದ (12)ನೇ ಖಂಡದ (ಜಿ) ಬಾಬಿನಲ್ಲಿ ಉಲ್ಲಿಖಿತವಾದ ಯಾವುದೇ ಪ್ರಾಧಿಕಾರ, ನಿಗಮ, ಕಂಪನಿ, ಸಂಘ ಅಥವಾ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಲಾಭದ ಪದದಲ್ಲಿ ಪುನಃ ನಿಯೋಜನೆ ಹೊಂದಲು ಅನರ್ಹನಾಗತಕ್ಕದ್ದು.

(3) ಲೋಕಾಯುಕ್ತ ಮತ್ತು ಉಪಲೋಕಾಯುಕ್ತನಿಗೆ ಪ್ರತಿ ತಿಂಗಳು [1][ಅನುಕ್ರಮವಾಗಿ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮತ್ತು ಉಚ್ಛನ್ಯಾಯಾಲಯದ ಒಬ್ಬ ನ್ಯಾಯಾಧೀಶರ ವೇತನಕ್ಕೆ ಸಮಾನವಾದ][1] ವೇತನ ಸಂದಾಯ ಮಾಡತಕ್ಕದ್ದು:

[2][ ಪರಂತುಕ x x x][2]

1. 1991ರ ಅಧಿನಿಯಮ ಸಂಖ್ಯೆ: 30ರ ಮೂಲಕ ದಿನಾಂಕ: 01.01.1991ರಿಂದ ಪ್ರತಿಯೋಜಿಸಲಾಗಿದೆ.
2. 1986ರ ಅಧಿನಿಯಮ ಸಂಖ್ಯೆ: 15ರ ಮೂಲಕ ದಿನಾಂಕ: 04.12.1985ರಿಂದ ಲೋಪಿಸಲಾಗಿದೆ.

(4) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಸಂದೇಯವಿರುವ ಭತ್ಯಗಳು ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, -

(ಎ) ಲೋಕಾಯುಕ್ತನಿಗೆ ಸಂದೇಯವಿರುವ ಭತ್ಯಗಳು ಮತ್ತು ಇತರ ಸೇವಾ ಷರತ್ತುಗಳನ್ನು ನಿಯಮಿಸುವಲ್ಲಿ, ಭಾರತದ ಮುಖ್ಯ ನ್ಯಾಯಾಧೀಶನಿಗೆ ಸಂದೇಯವಿರುವ ಭತ್ಯಗಳು ಮತ್ತು ಇತರ ಸೇವಾ ಷರತ್ತುಗಳನ್ನು ಗಮನದಲ್ಲಿರಿಸಿಕೊಳ್ಳತಕ್ಕದ್ದು.

(ಬಿ) ಉಪಲೋಕಾಯುಕ್ತನಿಗೆ ಸಂದೇಯವಿರುವ ಭತ್ಯಗಳು ಮತ್ತು ಇತರ ಸೇವಾ ಷರತ್ತುಗಳನ್ನು ನಿಯಮಿಸುವಲ್ಲಿ ಉಚ್ಛ ನ್ಯಾಯಾಲಯದ ನ್ಯಾಯಾಧೀಶನಿಗೆ ಸಂದೇಯವಿರುವ ಭತ್ಯೆಗಳು ಹಾಗೂ ಇತರ ಸೇವಾ ಷರತ್ತುಗಳನ್ನು ಗಮನದಲ್ಲಿರಿಸಿಕೊಳ್ಳತಕ್ಕದ್ದು;

[1][(ಸಿ) ಲೋಕಾಯುಕ್ತನಿಗಾಗಲೀ, ಉಪಲೋಕಾಯುಕ್ತನಿಗಾಗಲೀ, ಯಾವುದೇ ತುಟ್ಟಿಭತ್ಯ, ಸಂದೇಯವಾಗತಕ್ಕದ್ದಲ್ಲ.][1]

ಮತ್ತು ಪರಂತು, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಸಂದೇಯವಿರುವ ಭತ್ಯಗಳನ್ನು ಮತ್ತು ಇತರ ಸೇವಾ ಷರತ್ತುಗಳನ್ನು ಅವನ ನೇಮಕಾತಿಯ ತರುವಾಯ ಅವನಿಗೆ ಅನನುಕೂಲವಾಗುವ ರೀತಿಯಲ್ಲಿ ಮಾರ್ಪಾಡು ಮಾಡತಕ್ಕದ್ದಲ್ಲ.

1. 1986ರ ಅಧಿನಿಯಮ ಸಂಖ್ಯೆ:15ರ ಮೂಲಕ ದಿನಾಂಕ: 04.12.1985ರಿಂದ ಸೇರಿಸಲಾಗಿದೆ.

(5) ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳಿಗೆ ಸಂಬಂಧಿಸಿದ ಅಥವಾ ಅವರಿಗೆ ಸಂದೇಯವಿರುವ ಎಲ್ಲ ವೇತನಗಳು, ಭತ್ಯಗಳು ಮತ್ತು ನಿವೃತ್ತಿ ವೇತನಗಳೂ ಸೇರಿದಂತೆ ಆ ಕಚೇರಿಯ ಆಡಳಿತ ವೆಚ್ಚಗಳನ್ನು ರಾಜ್ಯದ ಸಂಚಿತ ನಿಧಿಯ ಮೇಲೆ ಹೊಣೆ ಹಾಕತಕ್ಕದ್ದು.

[1][**6. ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ಪದಚ್ಯುತಿ.**-(1) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನನ್ನು, ಅವನ ವಿಷಯದಲ್ಲಿ ರುಜುವಾತಾದ ದುರ್ವರ್ತನೆಯ ಅಥವಾ ಅಸಾಮರ್ಥ್ಯದ ಕಾರಣಕ್ಕಾಗಿ ಪದಚ್ಯುತಿಗೊಳಿಸಬೇಕೆಂಬುದಾಗಿ ರಾಜ್ಯ ವಿಧಾನ ಮಂಡಲದ ಪ್ರತಿ ಸದನದಿಂದಲೂ ಆಯಾ ಸದನದ ಸಮಸ್ತ ಸದಸ್ಯ ಸಂಖ್ಯೆಯ ಬಹುಮತದ ಮೂಲಕ ಮತ್ತು ಹಾಜರಿರುವ ಮತ್ತು ಮತ ಕೊಡುವ ಆಯಾ ಸದನದ ಸದಸ್ಯರಲ್ಲಿ ಮೂರನೇ ಎರಡು ಭಾಗಕ್ಕೆ ಕಡಿಮೆಯಿಲ್ಲದ ಬಹುಮತದ ಮೂಲಕ ಸಮರ್ಥಿತವಾದ ಒಂದು ಮನವಿಯನ್ನು ರಾಜ್ಯಪಾಲರಿಗೆ ಅದೇ ಅಧಿವೇಶನದಲ್ಲಿ ಒಪ್ಪಿಸಿದ ತರುವಾಯ ರಾಜ್ಯಪಾಲರು ಹೊರಡಿಸಿರುವ ಆದೇಶದಿಂದಲ್ಲದೆ ಪದಚ್ಯುತಿಗೊಳಿಸತಕ್ಕದ್ದಲ್ಲ.

(2) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನನ್ನು ಪದಚ್ಯುತಿಗೊಳಿಸುವ ಗೊತ್ತುವಳಿ ಸೂಚನೆಯನ್ನು ಲಿಖಿತದಲ್ಲಿ,-

(ಎ) ಕರ್ನಾಟಕ ರಾಜ್ಯ ವಿಧಾನ ಸಭೆಯ ಸಭಾಧ್ಯಕ್ಷರಿಗೆ, ಆ ಸದನದ ಮೂರನೇ ಒಂದಕ್ಕಿಂತ ಕಡಿಮೆ ಇಲ್ಲದ ಒಟ್ಟು ಸದಸ್ಯರ ಯುಕ್ತ ಸಹಿಯೊಂದಿಗೆ; ಅಥವಾ

(ಬಿ) ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿನ ಸಭಾಪತಿಯವರಿಗೆ, ಆ ಸದನದ ಮೂರನೇ ಒಂದಕ್ಕಿಂತ ಕಡಿಮೆ ಇಲ್ಲದ ಒಟ್ಟು ಸದಸ್ಯರ ಯುಕ್ತ ಸಹಿಯೊಂದಿಗೆ,

–ನೀಡಬಹುದು.

(3) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಗೊತ್ತುವಳಿ ಸೂಚನೆಯನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ, ಸಭಾಧ್ಯಕ್ಷರು ಅಥವಾ ಸಂದರ್ಭಾನುಸಾರವಾಗಿ ಸಭಾಪತಿಯವರು, ತಾನು ಸೂಕ್ತವೆಂದು ಭಾವಿಸಬಹುದಾದಂಥ ವ್ಯಕ್ತಿಗಳು, ಯಾರಾದರೂ ಇದ್ದಲ್ಲಿ, ಅವರೊಡನೆ ಸಮಾಲೋಚಿಸಿದ ತರುವಾಯ ಮತ್ತು ತನಗೆ ಲಭ್ಯವಿರಬಹುದಾದ ಅಂಥ ವಾಸ್ತವಾಂಶಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಪರಿಗಣಿಸಿದ ತರುವಾಯ ಮತ್ತು ಲೋಕಾಯುಕ್ತ ಅಥವಾ ಸಂದರ್ಭಾನುಸಾರವಾಗಿ ಉಪಲೋಕಾಯುಕ್ತನ ಅಸಾಮರ್ಥ್ಯತೆ ಅಥವಾ ದುರ್ವರ್ತನೆಯ ಪ್ರಕರಣ ಇದೆ ಎಂಬುದರ ಬಗ್ಗೆ ಮೇಲ್ನೋಟಕ್ಕೆ ತನಗೆ ಮನದಟ್ಟಾದ ತರುವಾಯ, ಗೊತ್ತುವಳಿಯನ್ನು ಅಂಗೀಕರಿಸಬಹುದು ಅಥವಾ ಅದನ್ನು ಅಂಗೀಕರಿಸುವುದನ್ನು ನಿರಾಕರಿಸಬಹುದು.

(4) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಗೊತ್ತುವಳಿ ಸೂಚನೆಯನ್ನು ಅಂಗೀಕರಿಸಿದಲ್ಲಿ, ಸಭಾಧ್ಯಕ್ಷರು ಅಥವಾ ಸಂದರ್ಭಾನುಸಾರವಾಗಿ ಸಭಾಪತಿಯವರು ಗೊತ್ತುವಳಿಯನ್ನು ಬಾಕಿ ಇಡತಕ್ಕದ್ದು ಮತ್ತು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನನ್ನು ಪದಚ್ಯುತಿಗೊಳಿಸುವಂತೆ ಕೋರಿರುವ ಆಧಾರದಲ್ಲಿ ತನಿಖೆಯನ್ನು ನಡೆಸುವ ಉದ್ದೇಶಕ್ಕಾಗಿ ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ವಿಷಯವನ್ನು ಉಲ್ಲೇಖಿಸತಕ್ಕದ್ದು:

ಪರಂತು, (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಗೊತ್ತುವಳಿ ಸೂಚನೆಗಳನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಒಂದೇ ದಿನ ನೀಡಿದ್ದಲ್ಲಿ, ಉಭಯ ಸದನಗಳಲ್ಲಿ ಗೊತ್ತುವಳಿಯನ್ನು ಅಂಗೀಕರಿಸಿದ ಹೊರತು ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ಉಲ್ಲೇಖಿಸತಕ್ಕದ್ದಲ್ಲ ಮತ್ತು ಉಭಯ ಸದನಗಳಲ್ಲಿ ಅಂಥ ಗೊತ್ತುವಳಿಯನ್ನು ಅಂಗೀಕರಿಸಿದ್ದಲ್ಲಿ, ಸಭಾಧ್ಯಕ್ಷರು ಮತ್ತು ಸಭಾಪತಿಯವರು ಜಂಟಿಯಾಗಿ ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ವಿಷಯವನ್ನು ಉಲ್ಲೇಖಿಸತಕ್ಕದ್ದು.

ಮತ್ತು ಪರಂತು, ಮೇಲೆ ಹೇಳಿದ ಗೊತ್ತುವಳಿ ಸೂಚನೆಗಳನ್ನು ವಿಧಾನ ಮಂಡಲದ ಸದನಗಳಲ್ಲಿ ಬೇರೆ ಬೇರೆ ದಿನಾಂಕಗಳಂದು ನೀಡಲಾಗಿದ್ದರೆ, ತದನಂತರ ನೀಡಲಾದ ಸೂಚನೆಯು ತಿರಸ್ಕೃತವಾಗತಕ್ಕದ್ದು.

(5) ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ಗೊತ್ತುವಳಿಯನ್ನು ಉಲ್ಲೇಖಿಸಿದಾಗ, ಕರ್ನಾಟಕದ ಮುಖ್ಯ ನ್ಯಾಯಾಧೀಶರು ಅಥವಾ ಸಂದರ್ಭಾನುಸಾರವಾಗಿ ಅವರು ನಾಮನಿರ್ದೇಶಿಸಿರುವ ಉಚ್ಚನ್ಯಾಯಾಲಯದ ಅಂಥ ಇತರ ನ್ಯಾಯಾಧೀಶರು, ಯಾವ ಉದ್ದೇಶದ ಆಧಾರದಲ್ಲಿ ತನಿಖೆಯನ್ನು ನಡೆಸಲು ಉದ್ದೇಶಿಸಲಾಗಿದೆಯೋ ಅದರ ಮೇಲೆ ಲೋಕಾಯುಕ್ತ ಅಥವಾ ಸಂದರ್ಭಾನುಸಾರವಾಗಿ ಉಪಲೋಕಾಯುಕ್ತನ ವಿರುದ್ಧ ನಿರ್ದಿಷ್ಟ ಚಾರ್ಜುಗಳನ್ನು ರೂಪಿಸತಕ್ಕದ್ದು. ಅಂಥ ಪ್ರತಿಯೊಂದು ಚಾರ್ಜನ್ನು ಯಾವ ಆಧಾರದ ಮೇಲೆ ಮಾಡಲಾಗಿದೆಯೋ ಆ ಆಧಾರಗಳ ಪಟ್ಟಿಯೊಂದಿಗೆ ಅಂಥ ಚಾರ್ಜುಗಳನ್ನು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ತಿಳಿಸತಕ್ಕದ್ದು ಮತ್ತು ಆತನಿಗೆ, ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಅಥವಾ ಅವರು ಹಾಗೆ ನಾಮನಿರ್ದೇಶನ ಮಾಡಿದ ಉಚ್ಚ ನ್ಯಾಯಾಲಯದ ಇತರ ನ್ಯಾಯಾಧೀಶರು, ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಅವಧಿಯೊಳಗೆ ರಕ್ಷಣಾ ಲಿಖಿತ ಹೇಳಿಕೆಯನ್ನು ಹಾಜರುಪಡಿಸುವುದಕ್ಕೆ ಸೂಕ್ತ ಅವಕಾಶವನ್ನು ನೀಡತಕ್ಕದ್ದು.

(6) ರಾಜ್ಯ ಸರ್ಕಾರವು, ಸಭಾಧ್ಯಕ್ಷರು ಅಥವಾ ಸಭಾಪತಿ ಅಥವಾ ಸಂದರ್ಭಾನುಸಾರವಾಗಿ ಇಬ್ಬರೂ ಅಗತ್ಯಪಡಿಸಿದರೆ, ಲೋಕಾಯುಕ್ತ ಅಥವಾ ಸಂದರ್ಭಾನುಸಾರವಾಗಿ ಉಪಲೋಕಾಯುಕ್ತನ ವಿರುದ್ಧ ಪ್ರಕರಣವನ್ನು ನಡೆಸಲು ಒಬ್ಬ ವಕೀಲರನ್ನು ನೇಮಿಸಬಹುದು.

(7) ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ಅಥವಾ ಅವರು ನಾಮನಿರ್ದೇಶಿಸಿದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ತನಿಖೆಯನ್ನು ನಡೆಸುವಲ್ಲಿ ತಮ್ಮದೇ ಆದ ಪ್ರಕ್ರಿಯೆಯನ್ನು ನಿಯಂತ್ರಿಸುವ ಅಧಿಕಾರವಿರತಕ್ಕದ್ದು ಮತ್ತು ಲೋಕಾಯುಕ್ತ ಅಥವಾ ಸಂದರ್ಭಾನುಸಾರವಾಗಿ ಉಪಲೋಕಾಯುಕ್ತನಿಗೆ ರಕ್ಷಣೆಯ ಲಿಖಿತ ಹೇಳಿಕೆಯನ್ನು ಹಾಜರುಪಡಿಸುವುದಕ್ಕೆ, ಸಾಕ್ಷಿಗಳನ್ನು ಪಾಟಿಸವಾಲು ಮಾಡುವುದಕ್ಕೆ, ಸಾಕ್ಷ್ಯವನ್ನು ಒದಗಿಸಲು ಮತ್ತು ತನ್ನ

ರಕ್ಷಣೆಯನ್ನು ಹೇಳಿಕೊಳ್ಳಲು ಆತನಿಗೆ ಅಥವಾ ಆತನ ವಕೀಲನ ಮೂಲಕ ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದು.

(8) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತನಿಖೆಯನ್ನು ಮಾಡುವ ಉದ್ದೇಶಕ್ಕಾಗಿ, ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಅಥವಾ ಅವನು ನಾಮನಿರ್ದೇಶಿಸಿದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಈ ಮುಂದಿನ ವಿಷಯಗಳ ಸಂಬಂಧದಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ದಾವೆಯನ್ನು ನಡೆಸಲು, ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಯಾವೊಬ್ಬ ವ್ಯಕ್ತಿಯ ಹಾಜರಾತಿಯನ್ನು ಸಮನು ಮಾಡುವುದು ಮತ್ತು ಒತ್ತಾಯಪಡಿಸುವುದು ಮತ್ತು ಆತನನ್ನು ಪ್ರಮಾಣದ ಮೇಲೆ ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳನ್ನು ಹುಡುಕುವುದು ಮತ್ತು ಸಲ್ಲಿಸುವುದನ್ನು ಅಗತ್ಯಪಡಿಸುವುದು;

(ಸಿ) ಪ್ರಮಾಣದ ಮೇಲೆ ಸಾಕ್ಷಿಯನ್ನು ಸ್ವೀಕರಿಸುವುದು;

(ಡಿ) ಸಾಕ್ಷಿಗಳು ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಮೀಷನುಗಳನ್ನು ಹೊರಡಿಸುವುದು.

(9) ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಅಥವಾ ಅವರು ನಾಮನಿರ್ದೇಶಿಸಿದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ತಮಗೆ ಉಲ್ಲೇಖಿಸಿದ ವಿಷಯವನ್ನು ತನಿಖೆ ಮಾಡಿದ ತರುವಾಯ ಒಂದು ವರದಿಯನ್ನು ಸಿದ್ದಪಡಿಸತಕ್ಕದ್ದು ಮತ್ತು ಅದನ್ನು ಅಂಥ ಉಲ್ಲೇಖದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಸಭಾಧ್ಯಕ್ಷರು ಅಥವಾ ಸಂದರ್ಭಾನುಸಾರವಾಗಿ ಸಭಾಪತಿಯವರಿಗೆ ಸಲ್ಲಿಸತಕ್ಕದ್ದು ಮತ್ತು ವಿಷಯವನ್ನು ಇಬ್ಬರೂ ಉಲ್ಲೇಖಿಸಿದ ಸಂದರ್ಭದಲ್ಲಿ ಸಭಾಧ್ಯಕ್ಷರಿಗೆ ಮತ್ತು ಸಭಾಪತಿಯವರಿಗೆ ಸಲ್ಲಿಸತಕ್ಕದ್ದು.

(10) ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಅಥವಾ ಅವರು ನಾಮನಿರ್ದೇಶಿಸಿದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ವರದಿಯು, ಯಾವ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ವಿರುದ್ಧ ಚಾರ್ಜನ್ನು ಮಾಡಲಾಗಿದೆಯೋ, ಅವರು ಯಾವುದೇ ದುರ್ವರ್ತನೆಯ ತಪ್ಪಿತಸ್ಥರಲ್ಲ ಅಥವಾ ಯಾವುದೇ ಅಸಾಮರ್ಥ್ಯತೆಯಿಂದ ಬಳಲುತ್ತಿಲ್ಲ ಎಂಬುದನ್ನು ಒಳಗೊಂಡಿದ್ದರೆ, ಅಂಥ ವರದಿಯ ಸಂಬಂಧದಲ್ಲಿ ರಾಜ್ಯ ವಿಧಾನ ಮಂಡಲದ ಯಾವುದೇ ಸದನದಲ್ಲಿ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದಲ್ಲ ಮತ್ತು ಬಾಕಿ ಗೊತ್ತುವಳಿಯ ಸಂಬಂಧದಲ್ಲಿ ಮುಂದಿನ ಪ್ರಕ್ರಿಯೆಯು ಅವಶ್ಯವಿರತಕ್ಕದ್ದಲ್ಲ.

(11) ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಅಥವಾ ಅವರು ನಾಮನಿರ್ದೇಶಿಸಿದ ನ್ಯಾಯಾಧೀಶನ ವರದಿಯು, ಯಾವ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ವಿರುದ್ಧ ಚಾರ್ಜನ್ನು ಮಾಡಲಾಗಿದೆಯೋ, ಅವರು ಯಾವುದೇ ದುರ್ವರ್ತನೆಯ ತಪ್ಪಿತಸ್ಥರೆಂದೂ ಅಥವಾ ಯಾವುದೇ ಅಸಾಮರ್ಥ್ಯತೆಯಿಂದ ಬಳಲುತ್ತಿದ್ದಾರೆ ಎಂಬುದನ್ನು ಒಳಗೊಂಡಿದ್ದರೆ, (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಇತ್ಯರ್ಥದಲ್ಲಿರುವ ಗೊತ್ತುವಳಿಯ ಜೊತೆಗೆ ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯನ್ಯಾಯಾಧೀಶರ ಅಥವಾ ಸಂದರ್ಭಾನುಸಾರವಾಗಿ ಅವರು ನಾಮನಿರ್ದೇಶಿಸಿದ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ವರದಿಯನ್ನು, ರಾಜ್ಯ ವಿಧಾನಮಂಡಲದ ಸದನ ಅಥವಾ ಸದನಗಳು ಪರಿಗಣನೆಗಾಗಿ ತೆಗೆದುಕೊಳ್ಳತಕ್ಕದ್ದು.

(12) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಗೊತ್ತುವಳಿಯನ್ನು, (1)ನೇ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನವು ಅಂಗೀಕರಿಸಿದಲ್ಲಿ, ಲೋಕಾಯುಕ್ತ ಅಥವಾ ಸಂದರ್ಭಾನುಸಾರವಾಗಿ ಉಪಲೋಕಾಯುಕ್ತನ ದುರ್ವರ್ತನೆಯು ಅಥವಾ ಅಸಾಮರ್ಥ್ಯತೆಯು ರುಜುವಾತಾಗಿದೆ ಎಂದು ಭಾವಿಸಕತಕ್ಕದ್ದು ಮತ್ತು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ಪದಚ್ಯುತಿಗಾಗಿನ ಕೋರಿಕೆಯುಳ್ಳ, ಸಭಾಧ್ಯಕ್ಷ ಮತ್ತು ಸಭಾಪತಿಯವರ ಯುಕ್ತ ಸಹಿ ಹೊಂದಿರುವ ಮನವಿಯನ್ನು ರಾಜ್ಯದ ರಾಜ್ಯಪಾಲರಿಗೆ ಸಲ್ಲಿಸತಕ್ಕದ್ದು.

(13) (12)ನೇ ಉಪಪ್ರಕರಣದ ಅಡಿಯಲ್ಲಿ ಮಾಡಲಾದ ಮನವಿಗೆ ರಾಜ್ಯಪಾಲರು ಒಪ್ಪಿಗೆಯನ್ನು ನೀಡಿದಾಗ, ಲೋಕಾಯುಕ್ತನನ್ನು ಅಥವಾ ಉಪಲೋಕಾಯುಕ್ತನನ್ನು ಕಾನೂನಿನ ಅನುಸಾರವಾಗಿ ಹುದ್ದೆಯಿಂದ ತೆಗೆದುಹಾಕಲಾಗಿದೆ ಎಂದು ಭಾವಿಸತಕ್ಕದ್ದು.

(14) ಲೋಕಾಯುಕ್ತ ಅಥವಾ ಸಂದರ್ಭಾನುಸಾರವಾಗಿ ಉಪಲೋಕಾಯುಕ್ತನ ವಿರುದ್ಧ ರಾಜ್ಯ ವಿಧಾನ ಮಂಡಲದ ಸದನ ಅಥವಾ ಸದನಗಳ ಮುಂದೆ ಆತನ ಪದಚ್ಯುತಿಗಾಗಿ ಗೊತ್ತುವಳಿಯನ್ನು ಮಂಡಿಸಿರುವಾಗ, ಹಾಗೂ ರಾಜ್ಯ ವಿಧಾನ ಮಂಡಲದ ಸದನ ಅಥವಾ ಸದನಗಳ ಮುಂದೆ ಆತನ ಪದಚ್ಯುತಿಗಾಗಿ ಗೊತ್ತುವಳಿಯು ಇತ್ಯರ್ಥದಲ್ಲಿರುವಾಗ, ಆತನನ್ನು ತನ್ನ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ತಡೆಹಿಡಿಯುವುದು.][1]

1. 2015ರ ಅಧಿನಿಯಮ ಸಂಖ್ಯೆ: 35ರ ಮೂಲಕ ದಿನಾಂಕ: 25.08.2015ರಿಂದ ಸೇರಿಸಲಾಗಿದೆ.

**7. ಲೋಕಾಯುಕ್ತ ಮತ್ತು ಒಬ್ಬ ಉಪಲೋಕಾಯುಕ್ತನು ತನಿಖೆ ಮಾಡಬಹುದಾದ ವಿಷಯಗಳು.-**

[1][(1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು,-

(ಎ) (i) ಮುಖ್ಯಮಂತ್ರಿ;

(ii) ಒಬ್ಬ ಮಂತ್ರಿ;

(iii) ರಾಜ್ಯ ವಿಧಾನಮಂಡಲದ ಒಬ್ಬ ಸದಸ್ಯ;

(iv) ಒಂದು ಸಂಘ, ಸಹಕಾರ ಸಂಘ ಅಥವಾ ಕಂಪನಿಗಳ ಅಧಿನಿಯಮ, 1956ರ 617ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗಿನ ಸರ್ಕಾರಿ ಕಂಪನಿಯು ಒಳಗೊಂಡಂತೆ ಒಂದು ಪ್ರಾಧಿಕಾರ, ಮಂಡಳಿ ಅಥವಾ ಸಮಿತಿಯ ಅಥವಾ ರಾಜ್ಯ ವಿಧಾನಮಂಡಲದ ಯಾವುದೇ ಕಾನೂನಿನ ಮೂಲಕ ಅಥವಾ ಅಡಿಯಲ್ಲಿ ಸ್ಥಾಪಿತವಾದ ಒಂದು ನಿಗಮದ ಅಥವಾ ಶಾಸನಾತ್ಮಕವಾದ ಅಥವಾ ಶಾಸನಾತ್ಮಕವಲ್ಲದ ಒಂದು ನಿಕಾಯದ, ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತರಾದ ಒಬ್ಬ ಅಧ್ಯಕ್ಷ ಅಥವಾ ಉಪಾಧ್ಯಕ್ಷ (ಯಾವುದೇ ಹೆಸರಿನಿಂದ ಕರೆದಿರಲಿ) ಅಥವಾ ಒಬ್ಬ ಸದಸ್ಯನು,

- ಕೈಗೊಂಡ ಅಥವಾ ಅವನ ಸಾಮಾನ್ಯ ಅಥವಾ ವಿಶೇಷ ಅನುಮೋದನೆಯೊಡನೆ ಕೈಗೊಂಡ ಯಾವುದೇ ಕ್ರಮದ ಸಂಬಂಧದಲ್ಲಿ ಒಂದು ದೂರು ಅಥವಾ ಆಪಾದನೆಯನ್ನು ಒಳಗೊಂಡ ಫಿರ್ಯಾದನ್ನು ಸಲ್ಲಿಸಲಾದ ಸಂದರ್ಭದಲ್ಲಿ,

(ಬಿ) ಮಾಸಿಕ ಇಪ್ಪತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚಿನ, ನಿಗದಿತ ವೇತನ, ಸಂಬಳ ಅಥವಾ ಗೌರವಧನವನ್ನಾಗಲೀ ಅಥವಾ ಕಾಲಕಾಲಕ್ಕೆ ಪರಿಷ್ಕರಿಸಬಹುದಾದ, ಇಪ್ಪತ್ತು ಸಾವಿರ ರೂಪಾಯಿಗಳಿಗೂ ಹೆಚ್ಚಿನ ಕನಿಷ್ಠ ವೇತನವುಳ್ಳ ವೇತನ ಶ್ರೇಣಿಯ ಒಂದು ಹುದ್ದೆ ಅಥವಾ ಪದವನ್ನು ಹೊಂದಿರುವ ಯಾವೊಬ್ಬ ಇತರ ಸಾರ್ವಜನಿಕ ನೌಕರನು ಕೈಗೊಂಡ ಅಂಥ ಕ್ರಮದ ಸಂದರ್ಭದಲ್ಲಿ ಅಥವಾ ಅಂಥ ಕ್ರಮವು ಒಂದು ದೂರು ಅಥವಾ ಆಪಾದನೆಯ ವಸ್ತುವಾಗಬಹುದೆಂದು ಅಥವಾ ಆಗಿರಬಹುದಾಗಿತ್ತೆಂದು ಲೋಕಾಯುಕ್ತನು ಅಭಿಪ್ರಾಯಪಡುವ ಯಾವುದೇ ಸಂದರ್ಭದಲ್ಲಿ ಅದನ್ನು ಲಿಖಿತದಲ್ಲಿ ದಾಖಲುಮಾಡಿ,

- ಲೋಕಾಯುಕ್ತನು ಅಂಥ ಕ್ರಮದ ಬಗ್ಗೆ ತನಿಖೆ ನಡೆಸಬಹುದು.][1]

1. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 23.07.2010ರಿಂದ ಪ್ರತಿಯೋಜಿಸಲಾಗಿದೆ.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಮುಖ್ಯಮಂತ್ರಿ, ಮಂತ್ರಿ, ರಾಜ್ಯ ವಿಧಾನ ಮಂಡಲದ ಸದಸ್ಯ, ಕಾರ್ಯದರ್ಶಿ ಅಥವಾ (1) ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಇತರ ಸಾರ್ವಜನಿಕ ನೌಕರನಾಗಿರುವ ಯಾವೊಬ್ಬ ಸಾರ್ವಜನಿಕ ನೌಕರನು ಕೈಗೊಂಡ ಅಥವಾ ಅವನ ಸಾಮಾನ್ಯ ಅಥವಾ ವಿಶೇಷ ಮಂಜೂರಾತಿ ಪಡೆದು ಕೈಗೊಂಡ ಕ್ರಮವನ್ನು ಕುರಿತು ದೂರು ಅಥವಾ ಆಪಾದನೆಯನ್ನು ಒಳಗೊಂಡ ಫಿರ್ಯಾದನ್ನು ಸಲ್ಲಿಸಲಾದಂಥ ಸಂದರ್ಭದಲ್ಲಿ ಅಥವಾ ಅಂಥ ಕ್ರಮವು ಒಂದು ದೂರು ಇಲ್ಲವೇ ಆಪಾದನೆಯ ಕಾರಣ ವಸ್ತುವಾಗಬಹುದು ಅಥವಾ ಆಗಿರಬಹುದಾಗಿತ್ತು ಎಂದು [2][ಉಪಲೋಕಾಯುಕ್ತನು ಲಿಖಿತದಲ್ಲಿ ದಾಖಲ್ಮಾಡಿದ][2] ಅಭಿಪ್ರಾಯಪಡುವ ಯಾವುದೇ ಸಂದರ್ಭದಲ್ಲಿ ಉಪಲೋಕಾಯುಕ್ತನು ಅಂಥ ಕ್ರಮದ ಕುರಿತು ತನಿಖೆ ಮಾಡಬಹುದು.

[1][(2ಎ) ಉಪ-ಪ್ರಕರಣ (1) ಮತ್ತು (2) ರಲ್ಲಿ ಏನೇ ಒಳಗೊಂಡಿದ್ದರೂ, ಸಾರ್ವಜನಿಕ ನೌಕರನು ಕೈಗೊಂಡ ಅಥವಾ ಅವನ ಸಾಮಾನ್ಯ ಅಥವಾ ವಿಶೇಷ ಅನುಮೋದನೆಯೊಂದಿಗೆ ಕೈಗೊಳ್ಳಲಾದ ಯಾವುದೇ ಕ್ರಮವನ್ನು ರಾಜ್ಯ ಸರ್ಕಾರವು ತನಿಖೆಗಾಗಿ ಕಳುಹಿಸಿದರೆ, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ತನಿಖೆ ಮಾಡಬಹುದು.][1]

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಸೇರಿಸಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 23.07.2010ರಿಂದ ಪ್ರತಿಯೋಜಿಸಲಾಗಿದೆ.

(3) ಈ ಅಧಿನಿಯಮದ ಮೇರೆಗೆ ಇಬ್ಬರು ಅಥವಾ ಹೆಚ್ಚು ಉಪಲೋಕಾಯುಕ್ತರನ್ನು ನೇಮಕ ಮಾಡಿರುವಲ್ಲಿ, [1][ಲೋಕಾಯುಕ್ತನು][1] ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅವರಲ್ಲಿ ಪ್ರತಿಯೊಬ್ಬರಿಗೆ ಈ ಅಧಿನಿಯಮದ ಮೇರೆಗೆ ಅವರು ತನಿಖೆ ಮಾಡಬಹುದಾದ ವಿಷಯಗಳನ್ನು ವಹಿಸಿ ಕೊಡಬಹುದು:

ಪರಂತು, ಈ ಅಧಿನಿಯಮದ ಮೇರೆಗೆ ಒಬ್ಬ ಉಪಲೋಕಾಯುಕ್ತನು ಮಾಡಿದ ಯಾವುದೇ ತನಿಖೆಯು ಮತ್ತು ಅಂಥ ತನಿಖೆಯ ಸಂಬಂಧದಲ್ಲಿ ಅವನು ಕೈಗೊಂಡ ಕ್ರಮ ಅಥವಾ ನಿರ್ವಹಿಸಿದ ಕಾರ್ಯವು ಅಂಥ ಆದೇಶದ ಮೂಲಕ ಅವನಿಗೆ ವಹಿಸಿಕೊಡದ ವಿಷಯಕ್ಕೆ ಸಂಬಂಧಿಸಿದೆ ಎಂಬ ಕಾರಣಮಾತ್ರದಿಂದಲೇ ಪ್ರಶ್ನಾರ್ಹವಾಗತಕ್ಕದ್ದಲ್ಲ.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

[1][(4) ಉಪ-ಪ್ರಕರಣ (1)ರಿಂದ (3)ರಲ್ಲಿ ಏನೇ ಒಳಗೊಂಡಿದ್ದರೂ, [2][ಉಪಲೋಕಾಯುಕ್ತನ ಪದವು ಆತನ ಮರಣ, ರಾಜೀನಾಮೆ, ನಿವೃತ್ತಿ, ತೆಗೆದುಹಾಕುವುದು ಅಥವಾ ಅನ್ಯಥಾ ಕಾರಣಗಳಿಂದಾಗಿ ರಿಕ್ತವಾದಾಗ ಅಥವಾ][2] ಗೈರುಹಾಜರಿ, ಅಸ್ವಸ್ಥತೆ ಅಥವಾ ಇತರ ಯಾವುವೇ ಕಾರಣಗಳಿಂದಾಗಿ ಒಬ್ಬ ಉಪ-ಲೋಕಾಯುಕ್ತನು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥನಾದಾಗ, ಅವನ ಪ್ರಕಾರ್ಯಗಳನ್ನು ಇತರ ಉಪಲೋಕಾಯುಕ್ತನಿದ್ದರೆ ಅವನು ಮತ್ತು ಇತರ ಉಪ-ಲೋಕಾಯುಕ್ತನು ಇಲ್ಲದಿದ್ದರೆ ಲೋಕಾಯುಕ್ತನು ನಿರ್ವಹಿಸಬಹುದು][1]

[3][(5) (1) ರಿಂದ (4)ನೇ ಉಪಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಲೋಕಾಯುಕ್ತನ ಅಭಿಪ್ರಾಯದಲ್ಲಿ, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ಪ್ರಕರಣಗಳು ಅಥವಾ ದೂರುಗಳು ಅಥವಾ ವಿಷಯಗಳು ಮುಂತಾದವುಗಳಲ್ಲಿ ಯಾವುದೇ ಒಂದನ್ನು ಆಲಿಸಲು ಅಥವಾ ಪರಿಗಣಿಸಲು ಅಥವಾ ಯಾವುದೇ ರೀತಿಯಲ್ಲಿ ವ್ಯವಹರಿಸಲು ಅಥವಾ ವಿಲೆ ಮಾಡಲು ಆತನು ಅಸಮರ್ಥನಾಗಿದ್ದಲ್ಲಿ, ಆತನು, ಆದೇಶದ ಮೂಲಕ, ಲಿಖಿತದಲ್ಲಿ, ಅಂಥ ಪ್ರಕರಣಗಳು ಅಥವಾ ದೂರುಗಳು ಅಥವಾ ವಿಷಯಗಳನ್ನು ಉಪಲೋಕಾಯುಕ್ತರಲ್ಲಿ ಯಾರಾದರೊಬ್ಬರಿಗೆ ಒಪ್ಪಿಸಬಹುದು ಅಥವಾ ವರ್ಗಾಯಿಸಬಹುದು:

ಪರಂತು, ಅಂಥ ಒಪ್ಪಿಸಿದ ಅಥವಾ ವರ್ಗಾಯಿಸಿದ ಪ್ರಕರಣಗಳು ಅಥವಾ ದೂರುಗಳು ಅಥವಾ ವಿಷಯಗಳನ್ನು ಉಪಲೋಕಾಯುಕ್ತನು ತೆಗೆದುಕೊಂಡಾಗ, ಆತನು ಅಂಥ ಪ್ರಕರಣಗಳು ಅಥವಾ ದೂರುಗಳು ಅಥವಾ ವಿಷಯಗಳನ್ನು ವಿಲೆಗೊಳಿಸುವ ಉದ್ದೇಶಗಳಿಗಾಗಿ ಲೋಕಾಯುಕ್ತನದೇ ರೀತಿಯಲ್ಲಿ ಮತ್ತು ಅದೇ ವ್ಯಾಪ್ತಿಯಲ್ಲಿ ಸಕ್ಷಮನೆಂದು ಭಾವಿಸತಕ್ಕದ್ದು ಹಾಗೂ ಲೋಕಾಯುಕ್ತನ ಎಲ್ಲ ಅಧಿಕಾರಗಳನ್ನು ಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದು:

ಮತ್ತು ಪರಂತು, ಮೇಲೆ ಹೇಳಿದ ವಿಷಯದಲ್ಲಿ ಉಪಲೋಕಾಯುಕ್ತರು ತೆಗೆದುಕೊಂಡ ಕ್ರಮ ಅಥವಾ ಮಾಡಿದ ಆದೇಶಗಳು, ಲೋಕಾಯುಕ್ತನು ತೆಗೆದುಕೊಂಡಂತೆಯೇ ಅಥವಾ ಮಾಡಿದಂತೆಯೇ ಪರಿಣಾಮಕಾರಿಯಾಗಿರತಕ್ಕದ್ದು ಮತ್ತು ಸಿಂಧುವಾಗಿರತಕ್ಕದ್ದು:

ಅಲ್ಲದೇ ಪರಂತು, ಅಂಥ ಒಪ್ಪಿಸಿದ ಅಥವಾ ವರ್ಗಾಯಿಸಿದ ಪ್ರಕರಣಗಳು ಅಥವಾ ದೂರುಗಳು ಅಥವಾ ವಿಷಯಗಳ ಸಂಬಂಧದಲ್ಲಿ ಉಪಲೋಕಾಯುಕ್ತರು ತೆಗೆದುಕೊಂಡ ಯಾವುದೇ ಕ್ರಮ ಅಥವಾ ಮಾಡಿದ ಕೆಲಸಗಳು, ಈ ಅಧಿನಿಯಮದ ಅಡಿಯಲ್ಲಿ ಆತನಿಗೆ ವಹಿಸಿಕೊಡದ ವಿಷಯಕ್ಕೆ ಅಂಥ ತನಿಖೆಯು ಸಂಬಂಧಿಸಿದೆ ಎಂಬ ಕಾರಣ ಮಾತ್ರದಿಂದಲೇ ಪ್ರಶ್ನಾರ್ಹವಾಗತಕ್ಕದ್ದಲ್ಲ.][3]

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಸೇರಿಸಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 23.07.2010ರಿಂದ ಸೇರಿಸಲಾಗಿದೆ.
3. 2020ರ ಅಧಿನಿಯಮ ಸಂಖ್ಯೆ: 05ರ ಮೂಲಕ ದಿನಾಂಕ: 27.03.2020ರಿಂದ ಸೇರಿಸಲಾಗಿದೆ.

**8. ತನಿಖೆಗೆ ಒಳಪಡದ ವಿಷಯಗಳು.–** (1) ಇದರಲ್ಲಿ ಇನ್ನು ಮುಂದೆ ಉಪ ಬಂಧಿಸಿರುವ ಹೊರತಾಗಿ, ಯಾವುದೇ ಕ್ರಮವನ್ನು ಕುರಿತು ದೂರನ್ನು ಒಳಗೊಂಡ ಫಿರ್ಯಾದನ್ನು ನೀಡಿದಾಗ,–

(ಎ) ಅಂಥ ಕ್ರಮವು ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದ್ದರೆ; ಅಥವಾ

(ಬಿ) ಫಿರ್ಯಾದು ನೀಡಿದವರಿಗೆ ಯಾವುದೇ ನ್ಯಾಯಾಧೀಕರಣ, [1][ನ್ಯಾಯಾಲಯ, ಅಧಿಕಾರಿ ಮತ್ತು ಇತರ ಪ್ರಾಧಿಕಾರ][1] ದ ಮುಂದೆ ಅಪೀಲು, ಪುನರೀಕ್ಷಣ ಅಥವಾ ಪುನರ್ವಿಲೋಕನದ ಅಥವಾ ಇತರ ವ್ಯವಹರಣೆಗಳ ಮೂಲಕ ಯಾವುದೇ ಪರಿಹಾರ ಪಡೆಯಲು ಅವಕಾಶ ಇರುವುದಾದರೆ ಅಥವಾ [1][ಇದ್ದರೆ ಮತ್ತು ಅದರ ಪ್ರಯೋಜನ ಪಡೆಯದಿದ್ದರೆ,][1]

–ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಈ ಅಧಿನಿಯಮದ ಮೇರೆಗೆ ಯಾವುದೇ ತನಿಖೆಯನ್ನು ನಡೆಸತಕ್ಕದ್ದಲ್ಲ.

1. 1988ರ ಅಧಿನಿಯಮ ಸಂಖ್ಯೆ: 1ರ ಮೂಲಕ ದಿನಾಂಕ: 25.02.1988ರಿಂದ ಪ್ರತಿಯೋಜಿಸಲಾಗಿದೆ.

(2) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು,-

(ಎ) ಸಂದರ್ಭಾನುಸಾರ, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ಪೂರ್ವ ಸಹಮತಿ ಪಡೆದು ವಿದ್ಯುಕ್ತ ಮತ್ತು ಸಾರ್ವಜನಿಕ ತನಿಖೆ ನಡೆಯತಕ್ಕದ್ದೆಂದು ಆದೇಶಿಸಲಾದ ಯಾವುದೇ ಕ್ರಮದ ಬಗ್ಗೆ;

(ಬಿ) ಸಂದರ್ಭಾನುಸಾರ, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ಪೂರ್ವ ಸಹಮತಿ ಪಡೆದು ವಿಚಾರಣಾ ಆಯೋಗಗಳ ಅಧಿನಿಯಮ, 1952ರ ಮೇರೆಗೆ ವಿಚಾರಣೆಗಾಗಿ ಕಳುಹಿಸಿ ಕೊಡಲಾದ ಎಂದು ವಿಷಯಕ್ಕೆ ಸಂಬಂಧಿಸಿದ ಯಾವುದೇ ಕ್ರಮದ ಬಗ್ಗೆ;

(ಸಿ) ಯಾವ ಕ್ರಮದ ವಿರುದ್ಧ ದೂರನ್ನು ಒಳಗೊಂಡ ಫಿರ್ಯಾದನ್ನು ಸಲ್ಲಿಸಲಾಗಿದೆಯೋ ಆ ಕ್ರಮವು ಫಿರ್ಯಾದು ಸಲ್ಲಿಸಿದವರಿಗೆ ತಿಳಿದ ದಿನಾಂಕದಿಂದ ಆರು ತಿಂಗಳ ಅವಧಿಯು ಮುಕ್ತಾಯವಾದ ತರುವಾಯ ಆ ಫಿರ್ಯಾದನ್ನು ನೀಡಿರುವ ಸಂದರ್ಭದಲ್ಲಿ; ಅಥವಾ

(ಡಿ) ಯಾವ ಕ್ರಮದ ವಿರುದ್ಧ ಆಪಾದನೆಯನ್ನು ಒಳಗೊಂಡ ಫಿರ್ಯಾದನ್ನು ಸಲ್ಲಿಸಲಾಗಿದೆಯೋ ಆ ಕ್ರಮ ಯಾವ ದಿನಾಂಕದಂದು ಕೈಗೊಳ್ಳಲಾಯಿತು ಎಂದು ಆಪಾದಿಸಲಾಗಿದೆಯೋ ಆ ದಿನಾಂಕದಿಂದ ಐದು ವರ್ಷಗಳು ಮುಕ್ತಾಯವಾದ ತರುವಾಯ ನೀಡಿರುವ ಫಿರ್ಯಾದಿನ ಬಗ್ಗೆ;

-ತನಿಖೆ ನಡೆಸತಕ್ಕದ್ದಲ್ಲ:

ಪರಂತು, (ಸಿ) ಮತ್ತು (ಡಿ) ಖಂಡಗಳಲ್ಲಿ ಉಲ್ಲೇಖಿಸಿದ ಫಿರ್ಯಾದನ್ನು ಆ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸಲ್ಲಿಸದಿರಲು ತನಗೆ ಸಾಕಷ್ಟು ಕಾರಣಗಳಿದ್ದವೆಂದು ಫಿರ್ಯಾದಿಯು ಮನವರಿಕೆ ಮಾಡಿಕೊಟ್ಟರೆ, ಆ ಫಿರ್ಯಾದನ್ನು ತನಿಖೆಗಾಗಿ ಅಂಗೀಕರಿಸಬಹುದು.

(3) ವಿವೇಚನಾಧಿಕಾರವನ್ನು ಚಲಾಯಿಸುವಲ್ಲಿ ಒಳಗೊಳ್ಳಬೇಕಾದ ಅಂಶಗಳ ಕೊರತೆ ಮೇಲ್ನೋಟಕ್ಕೆ ವಿವೇಚನಾಧಿಕಾರವನ್ನು ತಪ್ಪಾಗಿ ಚಲಾಯಿಸಲಾಗಿದೆಯೆಂದು ಗಮನಿಸುವಷ್ಟರ ಮಟ್ಟಿಗೆ ಇವೆಯೆಂದು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಮನದಟ್ಟಾದ ಹೊರತು ವಿವೇಚನಾಧಿಕಾರವನ್ನು ಚಲಾಯಿಸುವುದನ್ನೊಳಗೊಂಡ ಯಾವುದೇ ಆಡಳಿತಾತ್ಮಕ ಕ್ರಮವನ್ನು ಪ್ರಶ್ನಿಸಲು ದೂರನ್ನೊಳಗೊಂಡ ಯಾವುದೇ ಫಿರ್ಯಾದಿನ ಸಂಬಂಧದಲ್ಲಿ ಈ ಅಧಿನಿಯಮದಲ್ಲಿ ಇರುವುದು ಯಾವುದೂ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಅಧಿಕಾರ ನೀಡುತ್ತದೆಂದು ಅರ್ಥೈಸತಕ್ಕದ್ದಲ್ಲ.

**9. ಫಿರ್ಯಾದುಗಳಿಗೆ ಮತ್ತು ತನಿಖೆಗೆ ಸಂಬಂಧಿಸಿದ ಉಪಬಂಧಗಳು.-** (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಫಿರ್ಯಾದು ನೀಡಬಹುದು.

[2][ಪರಂತು, ದೂರುಗಳ ಸಂದರ್ಭದಲ್ಲಿ ಬಾಧಿತ ವ್ಯಕ್ತಿಯು ಮರಣ ಹೊಂದಿದ್ದಲ್ಲಿ ಅಥವಾ ಯಾವುದೇ ಕಾರಣಕ್ಕಾಗಿ ಕಾರ್ಯ ನಿರ್ವಹಿಸಲು ಆತನು ಸ್ವತ: ಅಸಮರ್ಥನಾಗಿದ್ದರೆ, ಆತನ ಪರವಾಗಿ ಆತನ ಕಾನೂನುಬದ್ಧ ಪ್ರತಿನಿಧಿಗಳು ಅಥವಾ ಈ ಸಂಬಂಧದಲ್ಲಿ ಲಿಖಿತದಲ್ಲಿ ಆತನು ಪ್ರಾಧಿಕರಿಸಿದ ಯಾವೊಬ್ಬ ಇತರ ವ್ಯಕ್ತಿಯು ಫಿರ್ಯಾದನ್ನು ಸಲ್ಲಿಸಬಹುದು ಅಥವಾ ಈಗಾಗಲೇ ಸಲ್ಲಿಸಿದ್ದರೆ, ಅಭಿಯೋಜನೆ ನಡೆಸಬಹುದು.][2]

(2) ಪ್ರತಿಯೊಂದು ಫಿರ್ಯಾದನ್ನು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಒಂದು ಅಫಿಡವಿಟ್ಟಿನ ಸಹಿತ ವಿವರಣೆಯ ರೂಪದಲ್ಲಿ ಸಲ್ಲಿಸಬಹುದು.

(3) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ತಾನು ಸೂಕ್ತವೆಂದು ಭಾವಿಸುವಂಥ ಪ್ರಾರಂಭಿಕ ತನಿಖೆಯನ್ನು ನಡೆಸಿದ ತರುವಾಯ ಈ ಅಧಿನಿಯಮದ ಮೇರೆಗೆ ಯಾವುದೇ ತನಿಖೆಯನ್ನು ನಡೆಸಲು ಉದ್ದೇಶಿಸಿರುವಲ್ಲಿ, ಅವನು,-

(ಎ) ಫಿರ್ಯಾದಿನ [2][ಮತ್ತು ತನಿಖೆಯನ್ನು ಆತನು ತಾನಾಗಿಯೇ ಪ್ರಾರಂಭಿಸಿದ್ದರೆ, (7)ನೇ ಪ್ರಕರಣದ (1) ಅಥವಾ ಸಂದರ್ಭಾನುಸಾರ (2) ನೇ ಉಪಪ್ರಕರಣದ ಅಡಿಯಲ್ಲಿ ತನಿಖೆಯನ್ನು ಪ್ರಾರಂಭಿಸುವುದಕ್ಕಾಗಿ ದಾಖಲಿಸಿದ ತನ್ನ ಅಭಿಪ್ರಾಯದ][2] ಒಂದು ಪ್ರತಿಯನ್ನು ಸಾರ್ವಜನಿಕ ನೌಕರನಿಗೆ ಮತ್ತು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಗೆ ಕಳುಹಿಸತಕ್ಕದ್ದು;

(ಬಿ) ಅಂಥ ಫಿರ್ಯಾದಿನ [2][ಅಥವಾ 7ನೇ ಪ್ರಕರಣದ (1) ಮತ್ತು ಸಂದರ್ಭಾನುಸಾರ (2)ನೇ ಉಪಪ್ರಕರಣದ ಅಡಿಯಲ್ಲಿ ದಾಖಲಿಸಿದ ಅಭಿಪ್ರಾಯದ][2] ಮೇಲೆ ತನ್ನ ಟಿಪ್ಪಣಿಗಳನ್ನು ನೀಡಲು ಅಂಥ ಸಾರ್ವಜನಿಕ ನೌಕರನಿಗೆ ಅವಕಾಶ ಕೊಡತಕ್ಕದ್ದು;

(ಸಿ) ತನಿಖೆಗೆ ಸಂಬಂಧಪಟ್ಟ ದಸ್ತಾವೇಜುಗಳ ಸುರಕ್ಷಿತ ಅಭಿರಕ್ಷೆಯ ಬಗ್ಗೆ ತಾನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಹೊರಡಿಸಬಹುದು.

[3][(3ಎ) (3)ನೇ ಉಪಪ್ರಕರಣದಡಿಯಲ್ಲಿ ತನಿಖೆಗೆ ಆದೇಶಿಸುವ ಮೊದಲು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಉದ್ದೇಶಿಸಲಾದ ಪ್ರಾರಂಭಿಕ ವಿಚಾರಣೆಯನ್ನು, ಸಾಮಾನ್ಯವಾಗಿ ತೊಂಬತ್ತು ದಿನಗಳೊಳಗಾಗಿ ಮತ್ತು ಲಿಖಿತದಲ್ಲಿ ದಾಖಲಿಸಬಹುದಾದ ಕಾರಣಗಳಿಗಾಗಿ ದೂರು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳ ಮತ್ತಷ್ಟು ಅವಧಿಯೊಳಗಾಗಿ ಪೂರ್ಣಗೊಳಿಸತಕ್ಕದ್ದು.

(3ಬಿ) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು, ಅಂಥ ಪ್ರಾರಂಭಿಕ ವಿಚಾರಣೆಯನ್ನು ಮಾಡಿದ ತರುವಾಯ, (3)ನೇ ಉಪಪ್ರಕರಣದ ಅಡಿಯಲ್ಲಿ ಉಲ್ಲೇಖಿಸಿದಂತೆ ತನಿಖೆಯನ್ನು ನಡೆಸಬೇಕೆಂದು ನಿರ್ಧರಿಸಿದ ಸಂದರ್ಭದಲ್ಲಿ, ಆತನು ಸಾಧ್ಯವಾದಷ್ಟು ಶೀಘ್ರವಾಗಿ ಮತ್ತು ಪ್ರಾಶಸ್ತ್ಯವನ್ನು ನೀಡಿ (3)ನೇ ಉಪಪ್ರಕರಣದ ಅಡಿಯಲ್ಲಿ ತನಿಖೆಯನ್ನು ಪ್ರಾರಂಭಿಸಲು ಆತನು ಆದೇಶಿಸಿದ ದಿನಾಂಕದಿಂದ ಆರು ತಿಂಗಳ ಅವಧಿಯ ಒಳಗಾಗಿ ತನಿಖೆಯನ್ನು ನಡೆಸುವಂತೆ ಮಾಡತಕ್ಕದ್ದು:

ಪರಂತು, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಸದರಿ ಅವಧಿಯನ್ನು ಒಂದು ಬಾರಿಗೆ ಆರು ತಿಂಗಳಿಗೆ ಮೀರದ ಮತ್ತಷ್ಟು ಅವಧಿಗೆ ವಿಸ್ತರಿಸಬಹುದು:

ಮತ್ತು ಪರಂತು, ಮೇಲೆ ಹೇಳಲಾದಂತೆ ಪ್ರಾರಂಭಿಕ ವಿಚಾರಣೆ ಅಥವಾ ತನಿಖೆಯನ್ನು ಮುಕ್ತಾಯಗೊಳಿಸುವಲ್ಲಿನ ಯಾವುದೇ ವಿಳಂಬವು ವ್ಯವಹರಣೆಗಳನ್ನು ನಿರರ್ಥಕಗೊಳಿಸತಕ್ಕದ್ದಲ್ಲ ಅಥವಾ ಪ್ರತಿಕೂಲ ಪ್ರಭಾವ ಉಂಟುಮಾಡತಕ್ಕದ್ದಲ್ಲ, ಅದನ್ನು ಸಮರ್ಥನೆಯಾಗಿ ತೆಗೆದುಕೊಳ್ಳಲಾಗುವುದಿಲ್ಲ.][3]

(4) ಈ ಹಿಂದೆ ಹೇಳಿದುದನ್ನುಳಿದು, ಅಂಥ ಯಾವುದೇ ತನಿಖೆಯನ್ನು ನಡೆಸುವ ವಿಧಾನವು, ಮತ್ತು ಅದನ್ನು ಬಹಿರಂಗವಾಗಿ ಅಥವಾ ಗುಪ್ತವಾಗಿ ನಡೆಸಬೇಕೆ ಎಂಬುದು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಆ ಪ್ರಕರಣದ ಸನ್ನಿವೇಶಗಳಿಗೆ ಸೂಕ್ತವೆಂದು ಭಾವಿಸಬಹುದಾದಂತೆ ಇರತಕ್ಕದ್ದು.

(5) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು, ದೂರು ಅಥವಾ ಆಪಾದನೆಯನ್ನೊಳಗೊಂಡ ಯಾವುದೇ ಫಿರ್ಯಾದಿನ ಸಂಬಂಧದಲ್ಲಿ,-

(ಎ) ಆ ಫಿರ್ಯಾದು ಕ್ಷುಲ್ಲಕವೆಂದು ಅಥವಾ ಕಿರುಕುಳಕಾರಿಯೆಂದು ಅಥವಾ ಸದುದ್ದೇಶದಿಂದ ಸಲ್ಲಿಸಿದುದಲ್ಲವೆಂದು; ಅಥವಾ

(ಬಿ) ತನಿಖೆ ನಡೆಸುವುದಕ್ಕೆ ಅಥವಾ ಸಂದರ್ಭಾನುಸಾರ ತನಿಖೆಯನ್ನು ಮುಂದುವರಿಸಲು ಸಾಕಷ್ಟು ಕಾರಣಗಳಿಲ್ಲವೆಂದು; ಅಥವಾ

(ಸಿ) ಫಿರ್ಯಾದಿಗೆ ಇತರ ಪರಿಹಾರೋಪಾಯಗಳಿವೆಯೆಂದು ಮತ್ತು ಆ ಪ್ರಕರಣದ ಸನ್ನಿವೇಶಗಳಲ್ಲಿ ಫಿರ್ಯಾದಿಯು ಅಂಥ ಪರಿಹಾರೋಪಾಯಗಳನ್ನು ಪಡೆಯುವುದು ಹೆಚ್ಚು ಸೂಕ್ತವೆಂದು,

-ಅಭಿಪ್ರಾಯ ಪಟ್ಟರೆ, ತನ್ನ ವಿವೇಚನಾನುಸಾರ ಅವನು ಆ ಫಿರ್ಯಾದಿನ ತನಿಖೆ ನಡೆಸಲು ನಿರಾಕರಿಸಬಹುದು ಅಥವಾ ತನಿಖೆಯನ್ನು ನಿಲ್ಲಿಸಬಹುದು.

(6) ಯಾವುದೇ ಸಂದರ್ಭದಲ್ಲಿ, ಒಂದು ಫಿರ್ಯಾದನ್ನು ಅಂಗೀಕರಿಸದಿರಲು ಅಥವಾ ಒಂದು ಫಿರ್ಯಾದಿನ ಸಂಬಂಧದಲ್ಲಿ ಯಾವುದೇ ತನಿಖೆಯನ್ನು ಮುಂದುವರಿಸದಿರಲು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ನಿರ್ಧರಿಸುವಲ್ಲಿ ಅವನು ಆ ಸಂಬಂಧವಾದ ಕಾರಣಗಳನ್ನು ದಾಖಲು ಮಾಡಿ ಅವುಗಳನ್ನು ಫಿರ್ಯಾದಿಗೆ ಮತ್ತು ಸಂಬಂಧಪಟ್ಟ ಸಾರ್ವಜನಿಕ ನೌಕರನಿಗೆ ತಿಳಿಸತಕ್ಕದ್ದು.

(7) ಯಾವುದೇ ಕ್ರಮದ ಸಂಬಂಧದಲ್ಲಿ [1][ಈ ಅಧಿನಿಯಮದ ಮೇರೆಗೆ ಯಾವೊಬ್ಬ ಸಾರ್ವಜನಿಕ ನೌಕರನ ವಿರುದ್ಧ][1] ನಡೆಸುವ ತನಿಖೆ, ಅಂಥ ಕ್ರಮವನ್ನಾಗಲಿ ಆ ತನಿಖೆಗೆ ಒಳಪಟ್ಟ ಯಾವುದೇ ವಿಷಯದ ಸಂಬಂಧದಲ್ಲಿ ಮುಂದಿನ ಕ್ರಮ ಕೈಗೊಳ್ಳಲು [1][ಯಾವೊಬ್ಬ ಇತರ ಸಾರ್ವಜನಿಕ ನೌಕರನ][1] ಯಾವುದೇ ಅಧಿಕಾರ ಇಲ್ಲವೇ ಕರ್ತವ್ಯವನ್ನು ಬಾಧಿಸತಕ್ಕದ್ದಲ್ಲ.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 23.07.2010ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 2020ರ ಅಧಿನಿಯಮ ಸಂಖ್ಯೆ: 36ರ ಮೂಲಕ ದಿನಾಂಕ: 19.10.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**10. ಶೋಧನಾ ವಾರಂಟ್, ಮೊದಲಾದುವುಗಳ ಹೊರಡಿಸುವಿಕೆ.–** (1) ತಮ್ಮ ವಶದಲ್ಲಿರುವ ಮಾಹಿತಿಯ ಪರಿಣಾಮವಾಗಿ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ,–

(ಎ) (i) ಈ ಅಧಿನಿಯಮದ ಮೇರೆಗೆ ಸಮನು ಅಥವಾ ನೋಟೀಸು ನೀಡಲಾಗಿರುವ ಅಥವಾ ನೀಡಬಹುದಾದ ಯಾವೊಬ್ಬ ವ್ಯಕ್ತಿಯು, ತಾನು ನಡೆಸುವ ಯಾವುದೇ ವಿಚಾರಣೆ ಅಥವಾ ಇತರ ವ್ಯವಹರಣೆಗೆ ಅವಶ್ಯವಾದ ಅಥವಾ ಉಪಯುಕ್ತವಾದ ಅಥವಾ ಅದಕ್ಕೆ ಸುಸಂಗತವಾದ ಯಾವುದೇ ಸ್ವತ್ತು, ದಸ್ತಾವೇಜು ಅಥವಾ ವಸ್ತುವನ್ನು ಹಾಜರುಪಡಿಸುವುದಿಲ್ಲ ಅಥವಾ ಹಾಜರುಪಡಿಸಲಾರನು ಅಥವಾ ಹಾಜರುಪಡಿಸುವಂತೆ ಮಾಡುವುದಿಲ್ಲ ಅಥವಾ ಮಾಡಲಾರನೆಂದು;

(ii) ಯಾವೊಬ್ಬ ವ್ಯಕ್ತಿ ಯಾವುದೇ ಹಣ, ಚಿನ್ನ-ಬೆಳ್ಳಿ, ಒಡವೆ ಅಥವಾ ಇತರ ಅಮೂಲ್ಯ ವಸ್ತು ಅಥವಾ ಸಾಮಗ್ರಿಯನ್ನು ಹೊಂದಿದ್ದು, ಅಂಥ ಹಣ, ಚಿನ್ನ-ಬೆಳ್ಳಿ, ಒಡವೆ ಅಥವಾ ಇತರ ಅಮೂಲ್ಯ ವಸ್ತು ಅಥವಾ ಸಾಮಗ್ರಿಯು, ಜಾರಿಯಲ್ಲಿರುವ ಮತ್ತು ಹಾಗೆ ಹೊರಗೆಡವ- ಬೇಕೆಂದು ಅಗತ್ಯಪಡಿಸುವ ಯಾವುದೇ ಕಾನೂನಿನ ಅಥವಾ ನಿಯಮದ ಉದ್ದೇಶಗಳಿಗಾಗಿ ಅಧಿಕಾರಿಗಳಿಗೆ ಹೊರಗೆಡವದೆ ಇದ್ದ ಆದಾಯವನ್ನು ಅಥವಾ ಸ್ವತ್ತನ್ನು ಪೂರ್ಣವಾಗಿ ಅಥವಾ ಭಾಗಶಃ ಪ್ರತಿನಿಧಿಸುವುದೆಂದು, ನಂಬಲು ಕಾರಣವಿದ್ದರೆ, ಅಥವಾ

(ಬಿ) ತಾನು ನಡೆಸಬೇಕಾದ ಯಾವುದೇ ವಿಚಾರಣೆ ಅಥವಾ ಇತರ ವ್ಯವಹರಣೆಗಳ ಉದ್ದೇಶಗಳು ಸಾಮಾನ್ಯ ಶೋಧನೆ ಅಥವಾ ಪರಿವೀಕ್ಷಣೆಯ ಮೂಲಕ ಸಾಧಿತವಾಗುತ್ತದೆಂದು ಅವನು ಪರಿಗಣಿಸಿದರೆ,

[1][ಅವನು, ಅದಕ್ಕನುಸಾರವಾಗಿ ತನಿಖೆಯನ್ನು ಕೈಗೊಳ್ಳಲು ಅಥವಾ ಶೋಧನೆಯನ್ನು ನಡೆಸಲು ಪೊಲೀಸ್ ಇನ್ಸ್‌ಪೆಕ್ಟರ್ ದರ್ಜೆಗೆ ಕಡಿಮೆಯಿಲ್ಲದ ಯಾವೊಬ್ಬ ಪೊಲೀಸ್ ಅಧಿಕಾರಿಯನ್ನು ಮತ್ತು ವಿಶೇಷವಾಗಿ][1],–

(i) ಅಂಥ ಸ್ವತ್ತು, ದಸ್ತಾವೇಜು, ಹಣ, ಚಿನ್ನ-ಬೆಳ್ಳಿ, ಆಭರಣ ಅಥವಾ ಇತರ ಅಮೂಲ್ಯ ವಸ್ತು ಅಥವಾ ಸಾಮಗ್ರಿಯನ್ನು ಇಡಲಾಗಿದೆಯೆಂದು ಸಂದೇಹಪಡಲು ಕಾರಣವಿರುವ ಯಾವುದೇ ಕಟ್ಟಡ ಅಥವಾ ಸ್ಥಳವನ್ನು ಪ್ರವೇಶಿಸಲು ಮತ್ತು ಶೋಧಿಸಲು,

[2][(iಎ) ಶೋಧನೆಯನ್ನು ನಡೆಸಬೇಕಾದ ಯಾವುದೇ ವಸ್ತುವನ್ನು ತನ್ನಲ್ಲಿ ಬಚ್ಚಿಟ್ಟು ಕೊಂಡಿದ್ದಾನೆಂದು ಸಕಾರಣವಾಗಿ ಸಂದೇಹಕ್ಕೊಳಗಾಗುವ ಯಾವೊಬ್ಬ ವ್ಯಕ್ತಿಯನ್ನು ಶೋಧಿಸಲು,][2]

(ii) ಯಾವುದೇ ಬಾಗಿಲು, ಪೆಟ್ಟಿಗೆ, ಲಾಕರ್, ತಿಜೋರಿ, ಅಲಮಾರು ಅಥವಾ ಇತರ ಯಾವುವೇ ಕೋಶಗಳ ಬೀಗದ ಕೈಗಳು ದೊರೆಯದಿರುವಲ್ಲಿ, (1)ನೇ ಉಪಖಂಡದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಅವುಗಳ ಬೀಗವನ್ನು ಒಡೆಯಲು,

(iii) ಅಂಥ ಶೋಧನೆಯ ಫಲವಾಗಿ ಕಂಡುಬಂದ ಯಾವುದೇ ಆಸ್ತಿ, ದಸ್ತಾವೇಜುಗಳು, ಹಣ, ಚಿನ್ನ-ಬೆಳ್ಳಿ ಆಭರಣಗಳು ಅಥವಾ ಇತರ ಅಮೂಲ್ಯ ವಸ್ತುಗಳನ್ನು ಅಥವಾ ಸಾಮಗ್ರಿಗಳನ್ನು ಅಭಿಗ್ರಹಿಸಲು,

(iv) ಯಾವುದೇ ಸ್ವತ್ತು ಅಥವಾ ದಸ್ತಾವೇಜುಗಳ ಮೇಲೆ ಅವುಗಳನ್ನು ಗುರುತಿಸುವ ಸಲುವಾಗಿ ಗುರುತು ಚಿನ್ಹೆ ಕೊಡಲು, ಅವುಗಳ ಉದ್ಧೃತ ಭಾಗಗಳನ್ನು ಅಥವಾ ಪ್ರತಿಗಳನ್ನು ತೆಗೆಯಲು ಅಥವಾ ತೆಗೆಯುವಂತೆ ಮಾಡಲು,

(v) ಅಂಥ ಸ್ವತ್ತು, ದಸ್ತಾವೇಜುಗಳು, ಹಣ, ಚಿನ್ನ-ಬೆಳ್ಳಿ, ಆಭರಣಗಳು ಅಥವಾ ಇತರ ಅಮೂಲ್ಯ ವಸ್ತು ಅಥವಾ ಸಾಮಗ್ರಿಗಳ ಬಗ್ಗೆ ಟಿಪ್ಪಣಿ ಅಥವಾ ವಿವರಣ ಪಟ್ಟಿಯನ್ನು ಬರೆಯಲು,

-ಶೋಧನ ವಾರಂಟ್ ಮೂಲಕ ಅಧಿಕಾರ ನೀಡಬಹುದು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.
2. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಸೇರಿಸಲಾಗಿದೆ.

(2) ದಂಡ ಪ್ರಕ್ರಿಯಾ ಸಂಹಿತೆ, 1973ರ ಶೋಧನೆ ಮತ್ತು ಅಭಿಗ್ರಹಣಕ್ಕೆ ಸಂಬಂಧಪಟ್ಟ ಉಪಬಂಧಗಳು (1)ನೇ ಉಪಪ್ರಕರಣದ ಶೋಧನೆಗಳು ಮತ್ತು ಅಭಿಗ್ರಹಣಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ಅನ್ವಯಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ವಾರಂಟನ್ನು ಎಲ್ಲ ಉದ್ದೇಶಗಳಿಗಾಗಿ, ದಂಡ ಪ್ರಕ್ರಿಯಾ ಸಂಹಿತೆ, 1973ರ 93ನೇ ಪ್ರಕರಣದ ಮೇರೆಗೆ ನ್ಯಾಯಾಲಯವು ಹೊರಡಿಸಿದ ವಾರಂಟ್ ಎಂಬುದಾಗಿ ಭಾವಿಸತಕ್ಕದ್ದು.

**11. ಸಾಕ್ಷ್ಯ.-** (1) ಈ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗಿನ ಯಾವುದೇ ತನಿಖೆಯ ಉದ್ದೇಶಕ್ಕಾಗಿ (ಅಂಥ ತನಿಖೆಗೆ ಮುಂಚೆ ಪ್ರಾರಂಭಿಕ ತನಿಖೆ ಯಾವುದಾದರೂ ಇದ್ದಲ್ಲಿ, ಅದೂ ಸೇರಿದಂತೆ) ತನಿಖೆಗೆ ಸುಸಂಗತವಾದ ಮಾಹಿತಿಯನ್ನು ಒದಗಿಸಲು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ಶಕ್ತನೆಂದು ತಾನು ಅಭಿಪ್ರಾಯಪಡುವ ಯಾವೊಬ್ಬ ಸಾರ್ವಜನಿಕ ನೌಕರ ಅಥವಾ ಇತರ ಯಾವೊಬ್ಬ ವ್ಯಕ್ತಿಯನ್ನು ಅಂಥ ಯಾವುದೇ ಮಾಹಿತಿಯನ್ನು ಒದಗಿಸುವಂತೆ ಅಥವಾ ಅಂಥ ಯಾವುದೇ ದಸ್ತಾವೇಜನ್ನು ಹಾಜರುಪಡಿಸುವಂತೆ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಆಗತ್ಯಪಡಿಸಬಹುದು.

(2) ಅಂಥ ಯಾವುದೇ ತನಿಖೆಯ (ಪ್ರಾರಂಭಿಕ ತನಿಖೆಯೂ ಸೇರಿದಂತೆ) ಉದ್ದೇಶಕ್ಕಾಗಿ ಕೆಳಕಂಡ ವಿಷಯಗಳ ಸಂಬಂಧದಲ್ಲಿ, ಎಂದರೆ: -

(ಎ) ಯಾವೊಬ್ಬ ವ್ಯಕ್ತಿಯು ಹಾಜರಾಗುವಂತೆ ಸಮನು ಮಾಡುವುದು ಮತ್ತು ಒತ್ತಾಯ ಪಡಿಸುವುದು ಮತ್ತು ಪ್ರಮಾಣದ ಮೇಲೆ ಅವನನ್ನು ಪರೀಕ್ಷಿಸುವುದು.

(ಬಿ) ಯಾವುದೇ ದಸ್ತಾವೇಜನ್ನು ಪತ್ತೆ ಮಾಡುವಂತೆ ಮತ್ತು ಅದನ್ನು ಹಾಜರುಪಡಿಸುವಂತೆ ಅಗತ್ಯಪಡಿಸುವುದು.

(ಸಿ) ಅಫಿಡವಿಟ್ಟುಗಳ ಮೇಲೆ ಸಾಕ್ಷಿ ಪಡೆಯುವುದು.

(ಡಿ) ಯಾವುದೇ ನ್ಯಾಯಾಲಯ ಅಥವಾ ಕಚೇರಿಯಿಂದ ಯಾವುದೇ ಸರ್ಕಾರಿ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಅಧಿಗ್ರಹಿಸುವುದು.

(ಇ) ಸಾಕ್ಷಿದಾರರ ಅಥವಾ ದಸ್ತಾವೇಜುಗಳ ಪರೀಕ್ಷೆಗೆ ಕಮಿಷನ್‌ಗಳನ್ನು ಹೊರಡಿಸುವುದು.

(ಎಫ್) ನಿಯಮಿಸಬಹುದಾದಂಥ ಇತರ ವಿಷಯಗಳು.

-ಈ ವಿಷಯಗಳ ಸಂಬಂಧದಲ್ಲಿ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಮೇರೆಗೆ ದಾವೆಯ ವಿಚಾರಣೆ ನಡೆಸುವ ಕಾಲದಲ್ಲಿ ಸಿವಿಲ್ ನ್ಯಾಯಾಲಯಕ್ಕಿರುವ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(3) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ಮುಂದಿರುವ ಯಾವುದೇ ವ್ಯವಹರಣೆಯು ಭಾರತ ದಂಡ ಸಂಹಿತೆಯ 193ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ನ್ಯಾಯಿಕ ವ್ಯವಹರಣೆಯೆಂದು ಭಾವಿಸತಕ್ಕದ್ದು.

(4) ಯಾವೊಬ್ಬ ವ್ಯಕ್ತಿಯನ್ನು ಈ ಅಧಿನಿಯಮದ ನಿಮಿತ್ತ,-

(ಎ) ಕರ್ನಾಟಕ ರಾಜ್ಯದ ಕಾರ್ಯಕಲಾಪಗಳಿಗೆ ಅಥವಾ (ಯಾವುದೇ ಇತರ ರಾಷ್ಟ್ರದ ಸರ್ಕಾರದೊಂದಿಗೆ ಅಥವಾ ಯಾವುದೇ ಅಂತರರಾಷ್ಟ್ರೀಯ ಸಂಸ್ಥೆಯೊಂದಿಗೆ ಭಾರತವು ಇರಿಸಿಕೊಂಡಿರುವಂಥ ಸಂಬಂಧವೂ ಸೇರಿದಂತೆ) ಭಾರತದ ಭದ್ರತೆ ಅಥವಾ ರಕ್ಷಣೆ ಅಥವಾ ಅಂತರರಾಷ್ಟ್ರೀಯ ಸಂಬಂಧಗಳಿಗೆ ಪ್ರತಿಕೂಲ ಪ್ರಭಾವ ಬೀರುವ;

(ಬಿ) ರಾಜ್ಯ ಸರ್ಕಾರದ ಮಂತ್ರಿ ಮಂಡಲದ ಅಥವಾ ಮಂತ್ರಿ ಮಂಡಲದ ಯಾವುದೇ ಸಮಿತಿಯ ವ್ಯವಹರಣೆಗಳನ್ನು ಹೊರಗೆಡಹುವುದನ್ನೊಳಗೊಳ್ಳಬಹುದಾದ,

-ಯಾವುದೇ ಮಾಹಿತಿಯನ್ನು ಒದಗಿಸಲು ಅಥವಾ ಅಂಥ ಯಾವುದೇ ಪ್ರಶ್ನೆಗೆ ಉತ್ತರ ಕೊಡಲು ಅಥವಾ ಅಂಥ ಯಾವುದೇ ದಸ್ತಾವೇಜಿನ ಅಷ್ಟು ಭಾಗವನ್ನು ಹಾಜರುಪಡಿಸಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಆತನಿಗೆ ಅಧಿಕಾರ ನೀಡತಕ್ಕದ್ದಲ್ಲ ಮತ್ತು ಈ ಉಪಪ್ರಕರಣದ ಉದ್ದೇಶಕ್ಕಾಗಿ ಮುಖ್ಯ ಕಾರ್ಯದರ್ಶಿಯು ಯಾವುದೇ ಮಾಹಿತಿ, ಉತ್ತರ ಅಥವಾ ದಸ್ತಾವೇಜಿನ ಭಾಗವು (ಎ) ಖಂಡದಲ್ಲಿ ಅಥವಾ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಸ್ವರೂಪದ್ದಾಗಿರುವುದೆಂದು ಪ್ರಮಾಣೀಕರಿಸಿ ನೀಡಿದ ಪ್ರಮಾಣಪತ್ರವು ಬಂಧಕವಾಗಿರತಕ್ಕದ್ದು ಮತ್ತು ನಿರ್ಣಾಯಕವಾಗಿರತಕ್ಕದ್ದು.

(5) ಈ ಅಧಿನಿಯಮದ ಮೇರೆಗೆ ತನಿಖೆ ನಡೆಸುವ ಉದ್ದೇಶಕ್ಕಾಗಿ, ನ್ಯಾಯಾಲಯದ ಮುಂದಿರುವ ವ್ಯವಹರಣೆಗಳಲ್ಲಿ ಯಾವ ಸಾಕ್ಷ್ಯವನ್ನು ಕೊಡುವಂತೆ ಇಲ್ಲವೇ ಯಾವ ದಸ್ತಾವೇಜನ್ನು ಹಾಜರುಪಡಿಸುವಂತೆ ಯಾವೊಬ್ಬ ವ್ಯಕ್ತಿಯನ್ನು ಒತ್ತಾಯಪಡಿಸಲು ಸಾಧ್ಯವಿಲ್ಲವೋ ಅಂಥ ಯಾವುದೇ ಸಾಕ್ಷ್ಯವನ್ನು ಕೊಡುವಂತೆ ಅಥವಾ ದಸ್ತಾವೇಜನ್ನು ಹಾಜರುಪಡಿಸುವಂತೆ ಅವನನ್ನು ಒತ್ತಾಯಪಡಿಸತಕ್ಕದ್ದಲ್ಲ.

**12. ಲೋಕಾಯುಕ್ತನ ವರದಿಗಳು, ಮೊದಲಾದುವು.**- (1) [1][x x x][1] ದೂರನ್ನು ಒಳಗೊಂಡ [1][x x x][1] ಯಾವುದೇ ಕ್ರಮವನ್ನು ಕುರಿತು ತನಿಖೆ ನಡೆಸಿದ ತರುವಾಯ, ಅಂಥ ಕ್ರಮವು ಫಿರ್ಯಾದಿಗೆ ಅಥವಾ ಇತರ ಯಾವೊಬ್ಬ ವ್ಯಕ್ತಿಗೆ ಅನ್ಯಾಯ ಅಥವಾ ಅನುಚಿತ ತೊಂದರೆಯನ್ನು ಉಂಟುಮಾಡಿದೆಯೆಂದು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಮನದಟ್ಟಾದರೆ, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಲಿಖಿತ ವರದಿಯ ಮೂಲಕ [2][ಮೂರು ತಿಂಗಳೊಳಗೆ ಅಥವಾ ಯಾವುದೇ ಸಂದರ್ಭದಲ್ಲಿ ಫಿರ್ಯಾದಿನ ದಿನಾಂಕದಿಂದ ನಾಲ್ಕು ತಿಂಗಳಿಗೆ ಮೀರದಂತೆ][2] ಅಂಥ ಅನ್ಯಾಯವನ್ನು ಅಥವಾ ತೊಂದರೆಯನ್ನು ನಿರ್ದಿಷ್ಟಪಡಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಸಮಯದೊಳಗೆ ಪರಿಹರಿಸತಕ್ಕದ್ದೆಂದು ಅಥವಾ ನಿವಾರಿಸತಕ್ಕದ್ದೆಂದು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸು ಮಾಡತಕ್ಕದ್ದು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಲೋಪಿಸಲಾಗಿದೆ.
2. 2020ರ ಅಧಿನಿಯಮ ಸಂಖ್ಯೆ: 36ರ ಮೂಲಕ ದಿನಾಂಕ: 19.10.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) (1)ನೇ ಉಪ ಪ್ರಕರಣದ ಮೇರೆಗೆ ಯಾವ ಸಕ್ಷಮ ಪ್ರಾಧಿಕಾರಕ್ಕೆ ಒಂದು ವರದಿಯನ್ನು ಕಳುಹಿಸಲಾಗಿದೆಯೋ ಆ ಪ್ರಾಧಿಕಾರವು ಆ ವರದಿಯಲ್ಲಿ ನಿರ್ದಿಷ್ಟಪಡಿಸಿರುವ ಅವಧಿ ಪೂರ್ಣಗೊಂಡ ಒಂದು ತಿಂಗಳೊಳಗಾಗಿ ಆ ವರದಿಯ ಮೇರೆಗೆ ಕೈಗೊಂಡ ಕ್ರಮವನ್ನು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ತಿಳಿಸತಕ್ಕದ್ದು ಅಥವಾ ತಿಳಿಸುವ ಏರ್ಪಾಟು ಮಾಡತಕ್ಕದ್ದು.

(3) [1][x x x][1] ಆಪಾದನೆಯನ್ನೊಳಗೊಂಡ [1][x x x][1] ಯಾವುದೇ ಕ್ರಮದ ಕುರಿತು ತನಿಖೆ ನಡೆಸಿದ ತರುವಾಯ ಅಂಥ ಆಪಾದನೆಯನ್ನು ಪೂರ್ಣವಾಗಿ ಅಥವಾ ಭಾಗಶಃ [2][ಸಮರ್ಥಿಸಲಾಗಿದೆಯೆಂದು][2] ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಮನದಟ್ಟಾದರೆ ಅವನು ತನ್ನ ನಿರ್ಣಯವನ್ನು ಮತ್ತು ಶಿಫಾರಸ್ಸುಗಳನ್ನು ಸಂಬಂಧಪಟ್ಟ ದಸ್ತಾವೇಜು, ಸಾಮಗ್ರಿಗಳು ಮತ್ತು ಇತರ ಸಾಕ್ಷ್ಯಗಳೊಡನೆ ಸಕ್ಷಮ ಪ್ರಾಧಿಕಾರಕ್ಕೆ ಲಿಖಿತ ವರದಿಯ ಮೂಲಕ [3][ತನಿಖೆ ಪ್ರಾರಂಭವಾದ ದಿನಾಂಕದಿಂದ ಆರು ತಿಂಗಳೊಳಗೆ][3] ತಿಳಿಸತಕ್ಕದ್ದು.

[3][ಪರಂತು, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಸದರಿ ಅವಧಿಯನ್ನು ಆರು ತಿಂಗಳಿಗೆ ಮೀರದ ಮತ್ತಷ್ಟು ಅವಧಿಗೆ ವಿಸ್ತರಿಸಬಹುದು][3].

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಲೋಪಿಸಲಾಗಿದೆ.
2. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.
3. 2020ರ ಅಧಿನಿಯಮ ಸಂಖ್ಯೆ: 36ರ ಮೂಲಕ ದಿನಾಂಕ: 19.10.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(4) ಸಕ್ಷಮ ಪ್ರಾಧಿಕಾರವು (3)ನೇ ಉಪಪ್ರಕರಣದ ಮೇರೆಗೆ ತನಗೆ ಕಳುಹಿಸಿದ ವರದಿಯನ್ನು ಪರೀಕ್ಷಿಸತಕ್ಕದ್ದು ಮತ್ತು ಆ ವರದಿಯು ಬಂದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಆ ವರದಿಯನ್ನು ಆಧರಿಸಿ ಕೈಗೊಂಡ ಇಲ್ಲವೇ ಕೈಗೊಳ್ಳಲು ಉದ್ದೇಶಿಸಿದ ಕ್ರಮವನ್ನು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ತಿಳಿಸತಕ್ಕದ್ದು ಅಥವಾ ತಿಳಿಸುವ ಏರ್ಪಾಡು ಮಾಡತಕ್ಕದ್ದು.

(5) (1)ನೇ ಮತ್ತು (3)ನೇ ಉಪಪ್ರಕರಣಗಳಲ್ಲಿ ಉಲ್ಲಿಖಿತವಾದ ತಮ್ಮ ಶಿಫಾರಸುಗಳ ಇಲ್ಲವೇ ನಿರ್ಣಯಗಳ ಮೇರೆಗೆ ಕೈಗೊಂಡ ಇಲ್ಲವೇ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಸಮಾಧಾನ ಹೊಂದಿದರೆ, ಆ ವಿಷಯವನ್ನು ಸಂಬಂಧಪಟ್ಟ ಫಿರ್ಯಾದಿಗೆ, ಸಾರ್ವಜನಿಕ ನೌಕರನಿಗೆ ಮತ್ತು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸಿ ಪ್ರಕರಣವನ್ನು ಮುಕ್ತಾಯಗೊಳಿಸತಕ್ಕದ್ದು. ಆದರೆ, ಅವರಿಗೆ ಹಾಗೆ ಸಮಾಧಾನವಾಗದ ಸಂದರ್ಭದಲ್ಲಿ ಆ ಪ್ರಕರಣದ ಬಗ್ಗೆ ರಾಜ್ಯಪಾಲರಿಗೆ ವಿಶೇಷ ವರದಿಯನ್ನು ಸಲ್ಲಿಸಲು ಆ ಪ್ರಕರಣವು ಅರ್ಹವೆಂದು ಅವರು ಪರಿಗಣಿಸಿದಲ್ಲಿ, ಹಾಗೆ ಮಾಡಬಹುದು ಹಾಗೂ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಕ್ಕೆ ಹಾಗೂ ಫಿರ್ಯಾದಿಗೆ ಆ ಬಗ್ಗೆ ತಿಳಿಸತಕ್ಕದ್ದು.

[2][[1][(6) ಈ ಅಧಿನಿಯಮದ ಅಡಿಯಲ್ಲಿ, ಲೋಕಾಯುಕ್ತರು, ತಮ್ಮ ಮತ್ತು ಉಪಲೋಕಾಯುಕ್ತರ ಕಾರ್ಯನಿರ್ವಹಣೆಯ ಬಗ್ಗೆ ರಾಜ್ಯಪಾಲರಿಗೆ, ಒಂದು ಕ್ರೋಢೀಕೃತ ವಾರ್ಷಿಕ ವರದಿಯನ್ನು ಪ್ರತಿವರ್ಷದ ಅಕ್ಟೋಬರ್ 31ರಂದು ಅಥವಾ ಅದಕ್ಕೆ ಮೊದಲು ಒಪ್ಪಿಸತಕ್ಕದ್ದು.][1]][2].

1. 1988ರ ಅಧಿನಿಯಮ ಸಂಖ್ಯೆ: 1ರ ಮೂಲಕ ದಿನಾಂಕ: 25.02.1988ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ: 35ರ ಮೂಲಕ ದಿನಾಂಕ: 25.08.2015ರಿಂದ ಪ್ರತಿಯೋಜಿಸಲಾಗಿದೆ.

(7) (5)ನೇ ಉಪಪ್ರಕರಣದ ಮೇರೆಗೆ ವಿಶೇಷ ವರದಿ, ಅಥವಾ (6)ನೇ ಉಪಪ್ರಕರಣದ ಮೇರೆಗೆ ವಾರ್ಷಿಕ ವರದಿ ಬಂದ ತರುವಾಯ, ರಾಜ್ಯಪಾಲರು ಅದರ ಒಂದು ಪ್ರತಿಯನ್ನು ವಿವರಣಾತ್ಮಕ ಜ್ಞಾಪನದೊಂದಿಗೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸುವ ಏರ್ಪಾಡು ಮಾಡತಕ್ಕದ್ದು.

(8) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ತಾನು ಮುಕ್ತಾಯಗೊಳಿಸಿದ ಅಥವಾ ಅನ್ಯಥಾ ವಿಲೆ ಮಾಡಿದ ಪ್ರಕರಣಗಳ ಪೈಕಿ ಸಾಮಾನ್ಯ, ಸಾರ್ವಜನಿಕ, ಶೈಕ್ಷಣಿಕ ಅಥವಾ ವೃತ್ತೀಯ ಆಸಕ್ತಿಯುಳ್ಳದ್ದೆಂದು ತನಗೆ ಕಂಡುಬರಬಹುದಾದ ಪ್ರಕರಣಗಳ ಸಾರಾಂಶವನ್ನು ಸೂಕ್ತವೆಂದು ತಾನು ಭಾವಿಸಬಹುದಾದ ವಿಧಾನದಲ್ಲಿ ಮತ್ತು ಅಂಥ ವ್ಯಕ್ತಿಗಳಿಗೆ ತಮ್ಮ ವಿವೇಚನಾನುಸಾರ ಆಗಿಂದಾಗ್ಗೆ ಒದಗಿಸಬಹುದು.

**13. ಲೋಕಾಯುಕ್ತನು, ನಿರ್ದೇಶಿಸಿದರೆ, ಸಾರ್ವಜನಿಕ ನೌಕರನು ತನ್ನ ಪದವನ್ನು ರಿಕ್ತಗೊಳಿಸುವುದು ಮುಂತಾದುವು.-** (1) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಫಿರ್ಯಾದಿನ ಸಂಬಂಧದಲ್ಲಿ ತನಿಖೆ ನಡೆಸಿದ ತರುವಾಯ ಸಾರ್ವಜನಿಕ ನೌಕರನ ವಿರುದ್ಧವಾಗಿ ಇರುವ ಆಪಾದನೆಯನ್ನು ಒಳಗೊಳ್ಳುವ ಫಿರ್ಯಾದನ್ನು [1][ಸಮರ್ಥಿಸಲಾಗಿದೆಯೆಂದು][1] ಮತ್ತು ಸಂಬಂಧಪಟ್ಟ ಸಾರ್ವಜನಿಕ ನೌಕರನು ಅವನು ಇರುವ ಹುದ್ದೆಯಲ್ಲಿ ಮುಂದುವರಿಯತಕ್ಕದ್ದಲ್ಲವೆಂದು ಮನದಟ್ಟಾದರೆ, 12ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗಿನ ತನ್ನ ವರದಿಯಲ್ಲಿ, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಆ ಬಗ್ಗೆ ಒಂದು ಘೋಷಣೆ ಹೊರಡಿಸತಕ್ಕದ್ದು. [1][ಸಕ್ಷಮ ಪ್ರಾಧಿಕಾರವು ರಾಜ್ಯಪಾಲ, ರಾಜ್ಯ ಸರ್ಕಾರ ಅಥವಾ ಮುಖ್ಯಮಂತ್ರಿಗಳಾಗಿದ್ದಲ್ಲಿ, ಅದು [3][ಅಹವಾಲನ್ನು ಹೇಳಿಕೊಳ್ಳುವುದಕ್ಕೆ ಅವಕಾಶವನ್ನು ನೀಡಿದ ತರುವಾಯ][3] ಘೋಷಣೆಯನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು. ಇತರ ಸಂದರ್ಭಗಳಲ್ಲಿ, ಸಕ್ಷಮ ಪ್ರಾಧಿಕಾರವು ಅಂಥ ವರದಿಯ ಒಂದು ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ರಾಜ್ಯ ಸರ್ಕಾರ ಆ [3][ಅಹವಾಲನ್ನು ಹೇಳಿಕೊಳ್ಳುವುದಕ್ಕೆ ಅವಕಾಶವನ್ನು ನೀಡಿದ ತರುವಾಯ][3] ಘೋಷಣೆಯನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು][1] [1][ಸಂಧರ್ಭಾನುಸಾರ, ಸದರಿ (3)ನೇ ಉಪ ಪ್ರಕರಣದ ಮೇರೆಗಿನ ವರದಿ ಅಥವಾ ವರದಿಯ ಒಂದು ಪ್ರತಿಯನ್ನು][1] ಸ್ವೀಕರಿಸುವ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯೊಳಗೆ ಅದನ್ನು ತಿರಸ್ಕರಿಸದಿದ್ದರೆ, ಸದರಿ ಮೂರು ತಿಂಗಳ ಅವಧಿಯು ಮುಕ್ತಾಯವಾದ ಮೇಲೆ [2][x x x][2] ಅದನ್ನು ಅಂಗೀಕರಿಸಿರುವುದಾಗಿ ಭಾವಿಸತಕ್ಕದ್ದು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.
2. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಲೋಪಿಸಲಾಗಿದೆ.
3. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 23.07.2010ರಿಂದ ಸೇರಿಸಲಾಗಿದೆ.

(2) ಹಾಗೆ ಮಾಡಿದ ಘೋಷಣೆಯನ್ನು [1][ಅಂಗೀಕರಿಸಿದರೆ][1] ಅಥವಾ ಅಂಗೀಕರಿಸಿದೆಯೆಂದು ಭಾವಿಸಲಾದರೆ ಅಂಥ ಅಂಗೀಕಾರ ಅಥವಾ ಭಾವಿಸಲಾದ ಅಂಗೀಕಾರವನ್ನು [1][ರಾಜ್ಯಪಾಲ, ರಾಜ್ಯ ಸರ್ಕಾರ ಅಥವಾ ಮುಖ್ಯಮಂತ್ರಿ ಅವರಲ್ಲಿ ಯಾರಾದರೂ ಒಬ್ಬರು ಸಕ್ಷಮ ಪ್ರಾಧಿಕಾರಿಯಾಗಿದ್ದರೆ, ಅವರು ಮತ್ತು ಇತರ ಸಂದರ್ಭಗಳಲ್ಲಿ ರಾಜ್ಯ ಸರ್ಕಾರವು ನೋಂದಾಯಿತ ಅಂಚೆಯ ಮೂಲಕ ಕೂಡಲೇ ತಿಳಿಸತಕ್ಕದ್ದು][1] ಆಗ ಯಾವುದೇ ಕಾನೂನು, ಆದೇಶ, ಅಧಿಸೂಚನೆ, ನಿಯಮ ಅಥವಾ ನೇಮಕಾತಿ ಕರಾರಿನಲ್ಲಿ ಏನೇ ಇದ್ದರೂ [1][ಅಂಥ ಮಾಹಿತಿ ತಲುಪಿದ ದಿನಾಂಕದಿಂದ ಅಥವಾ ಅದಕ್ಕೆ][1] ಸಂಭಂಧಪಟ್ಟ ಸಾರ್ವಜನಿಕ ನೌಕರನು,-

(i) ಮುಖ್ಯ ಮಂತ್ರಿ ಅಥವಾ ಮಂತ್ರಿಯಾಗಿದ್ದರೆ ಸಂದರ್ಭಾನುಸಾರ ತನ್ನ ಮುಖ್ಯ ಮಂತ್ರಿಯ ಅಥವಾ ಮಂತ್ರಿಯ ಪದಕ್ಕೆ ರಾಜೀನಾಮೆ ಕೊಡತಕ್ಕದ್ದು.

[1][(ii) ಪ್ರಕರಣ 2ರ ಖಂಡ (12)ರ ಬಾಬುಗಳಾದ (ಇ) ಮತ್ತು (ಎಫ್)ಗಳಲ್ಲಿ ಬರುವ, ಆದರೆ ಬಾಬುಗಳಾದ (ಡಿ) ಮತ್ತು (ಜಿ)ಯೊಳಗೆ ಬರದ ಒಬ್ಬ ಸಾರ್ವಜನಿಕ ನೌಕರನು ತನ್ನ ಸ್ಥಾನವನ್ನು ರಿಕ್ತಗೊಳಿಸಿರುವುದಾಗಿ ಭಾವಿಸತಕ್ಕದ್ದು; ಮತ್ತು ][1]

(iii) [1][ಪ್ರಕರಣ 2ರ ಖಂಡ (12)ರ ಬಾಬುಗಳಾದ (ಡಿ) ಮತ್ತು (ಜಿ)ಗಳ ಅಡಿಯಲ್ಲಿ ಬರುವ ಸಾರ್ವಜನಿಕ ನೌಕರನಾಗಿದ್ದರೆ,][1] ನೇಮಕ ಪ್ರಾಧಿಕಾರಿಯ ಆದೇಶದ ಮೂಲಕ ಅವರನ್ನು ನಿಲಂಬನದಲ್ಲಿಡಲಾಗಿದೆ ಎಂದು ಭಾವಿಸತಕ್ಕದ್ದು:

ಪರಂತು, [1][ಸಾರ್ವಜನಿಕ ನೌಕರನು][1], ಅಖಿಲ ಭಾರತ ಸೇವಾ ಅಧಿನಿಯಮ, 1951ರ (ಕೇಂದ್ರಾಧಿನಿಯಮ, 1951ರ 61) 2ನೇ ಪ್ರಕರಣದಲ್ಲಿ ಪರಿಭಾಷಿಸಲಾದ ಅಖಿಲ ಭಾರತ ಸೇವೆಯ ಸದಸ್ಯನಾಗಿದ್ದರೆ, ರಾಜ್ಯ ಸರ್ಕಾರವು, ಅವನ ಸೇವೆಗಳಿಗೆ ಅನ್ವಯವಾಗತಕ್ಕ ನಿಯಮಗಳಿಗೆ ಮತ್ತು ವಿನಿಮಯಗಳಿಗೆ ಅನುಸಾರವಾಗಿ, ಅವನನ್ನು ನಿಲಂಬನದಲ್ಲಿಡಲು ಕ್ರಮಕೈಗೊಳ್ಳತಕ್ಕದ್ದು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

**14. ಅಭಿಯೋಜನೆಗಳ ಪ್ರಾರಂಭ.–** ಯಾವುದೇ ಫಿರ್ಯಾದಿನ ಸಂಬಂಧದಲ್ಲಿ ತನಿಖೆಯನ್ನು ನಡೆಸಿದ ತರುವಾಯ, ಸಾರ್ವಜನಿಕ ನೌಕರನು, ಯಾವುದೇ ಕ್ರಿಮಿನಲ್ ಅಪರಾಧವನ್ನು ಮಾಡಿದ್ದಾನೆಂದು [1][ಮತ್ತು ಅಂಥ ಅಪರಾಧಕ್ಕಾಗಿ ನ್ಯಾಯಾಲಯದಲ್ಲಿ ಅಭಿಯೋಜನೆಯನ್ನು ಹೂಡತಕ್ಕದ್ದೆಂದು,][1] ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಮನದಟ್ಟಾದರೆ, ಆಗ ಅವನು ಹಾಗೆ ಪರಿಣಮಿಸುವಂತೆ ಆದೇಶ ಹೊರಡಿಸಬಹುದು ಮತ್ತು ಸಂಬಂಧಪಟ್ಟ ಸಾರ್ವಜನಿಕ ನೌಕರನ ಅಭಿಯೋಜನೆಯನ್ನು ಪ್ರಾರಂಭಿಸಬಹುದು ಮತ್ತು ಅಂಥ ಅಭಿಯೋಜನೆಗೆ ಯಾವುದೇ ಪ್ರಾಧಿಕಾರದ ಪೂರ್ವ ಮಂಜೂರಾತಿಯ ಅಗತ್ಯವಿದ್ದರೆ ಆಗ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಂಥ ಆದೇಶವನ್ನು ನೀಡಿದ ದಿನಾಂಕದಂದು ಯುಕ್ತ ಪ್ರಾಧಿಕಾರವು ಅಂಥ ಮಂಜೂರಾತಿಯನ್ನು ನೀಡಿದೆಯೆಂದು ಭಾವಿಸತಕ್ಕದ್ದು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

**15. ಲೋಕಾಯುಕ್ತನ ಸಿಬ್ಬಂದಿ ವರ್ಗ, ಮೊದಲಾದವು.–** [1][(1) ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಅಥವಾ ಉಪಲೋಕಾಯುಕ್ತರು ಈ ಅಧಿನಿಯಮದ ಮೇರೆಗಿನ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅವರಿಗೆ ನೆರವಾಗಲು ನಿಯಮಿಸಬಹುದಾದಂಥ ಅಧಿಕಾರಿಗಳು ಮತ್ತು ನೌಕರರು ಇರತಕ್ಕದ್ದು.][1]

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 15.01.1986ರಿಂದ ಪ್ರತಿಯೋಜಿಸಲಾಗಿದೆ.

(2) (1)ನೇ ಉಪಪ್ರಕರಣದಲ್ಲಿ ಉಲ್ಲಿಖಿತರಾದ ಅಧಿಕಾರಿಗಳು ಮತ್ತು ನೌಕರರು ನಿರ್ಭಯವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ನೆರವಾಗುವಲ್ಲಿ ಅವಶ್ಯವಿರಬಹುದಾದಂಥ ವಿಶೇಷ ಷರತ್ತುಗಳೂ ಸೇರಿ ಅವರ ಸೇವಾಭರ್ತಿ, ಸೇವಾ ಷರತ್ತುಗಳು ಸಂದರ್ಭಾನುಸಾರ, [1][x x x][1] ಲೋಕಾಯುಕ್ತರೊಡನೆ ಸಮಾಲೋಚನೆ ನಡೆಸಿ ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 15.01.1986ರಿಂದ ಲೋಪಿಸಲಾಗಿದೆ.

(3) (1)ನೆಯ ಉಪಪ್ರಕರಣದ ಉಪಬಂಧಗಳಿಗೆ ಪ್ರತಿಕೂಲವಾಗದಂತೆ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಈ ಅಧಿನಿಯಮದ ಮೇರೆಗೆ ತನಿಖೆ ನಡೆಸುವ ಉದ್ದೇಶಕ್ಕಾಗಿ,–

[1][(ಎ) ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿ ಅಥವಾ ತನಿಖಾ ಏಜೆನ್ಸಿಯ ಸೇವೆಯನ್ನು;

(ಎಎ) [3][ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಸಹಮತಿಯನ್ನು ಪಡೆದು ಕೇಂದ್ರ ಸರ್ಕಾರದ][3] ಯಾವೊಬ್ಬ ಅಧಿಕಾರಿ ಅಥವಾ ತನಿಖಾ ಏಜೆನ್ಸಿಯ ಸೇವೆಯನ್ನು; ಅಥವಾ][1]

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 23.07.2010ರಿಂದ ಪ್ರತಿಯೋಜಿಸಲಾಗಿದೆ.

(ಬಿ) [2][ಯಾವೊಬ್ಬ ವ್ಯಕ್ತಿ ಅಥವಾ ಇತರ ಯಾವುದೇ ಏಜೆನ್ಸಿಯ][2] ಸೇವೆಯನ್ನು, ಬಳಸಿಕೊಳ್ಳಬಹುದು.

[1][(4) ಉಪ-ಪ್ರಕರಣ (1) ರಲ್ಲಿ ಉಲ್ಲೇಖಿಸಲಾಗಿರುವ ಅಧಿಕಾರಿಗಳು ಮತ್ತು ಇತರ ನೌಕರರು ಲೋಕಾಯುಕ್ತನ ಆಡಳಿತಾತ್ಮಕ ಮತ್ತು ಶಿಸ್ತು ಪಾಲನೆಯ ನಿಯಂತ್ರಣದಡಿಯಲ್ಲಿರತಕ್ಕದ್ದು.

ಪರಂತು [3][ಲೋಕಾಯುಕ್ತನ ಪದವು ಆತನ ಮರಣ, ರಾಜೀನಾಮೆ, ನಿವೃತ್ತಿ, ತೆಗೆದುಹಾಕುವುದು ಅಥವಾ ಅನ್ಯಥಾ ಕಾರಣಗಳಿಂದಾಗಿ ರಿಕ್ತವಾಗಿದ್ದರೆ ಅಥವಾ][3] ಲೋಕಾಯುಕ್ತನು ಗೈರು ಹಾಜರಿ, ಅಸ್ವಸ್ಥತೆ ಅಥವಾ ಯಾವುದೇ ಇತರ ಕಾರಣಗಳಿಂದ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥನಾದರೆ ಉಪ-ಲೋಕಾಯುಕ್ತನು ಅಥವಾ ಒಬ್ಬನಿಗಿಂತ ಹೆಚ್ಚು ಉಪ-ಲೋಕಾಯುಕ್ತರಿದ್ದರೆ ಅವರ ಪೈಕಿ ಜ್ಯೇಷ್ಠ ಉಪ-ಲೋಕಾಯುಕ್ತನು ಈ ಉಪ-ಪ್ರಕರಣದ ಮೇರೆಗಿನ ಲೋಕಾಯುಕ್ತನ ಪ್ರಕಾರ್ಯಗಳನ್ನು ನಿರ್ವಹಿಸಬಹುದು.][1]

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 15.01.1986ರಿಂದ ಸೇರಿಸಲಾಗಿದೆ.

2. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 01.08.2006ರಿಂದ ಪ್ರತಿಯೋಜಿಸಲಾಗಿದೆ.
3. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 23.07.2010ರಿಂದ ಸೇರಿಸಲಾಗಿದೆ.

**16. ಮಾಹಿತಿಯ ಗೌಪ್ಯ.-** (1) ಈ ಅಧಿನಿಯಮದ ಮೇರೆಗೆ ನಡೆಯುವ ಯಾವುದೇ ತನಿಖೆಯ ಕಾಲದಲ್ಲಿ ಅಥವಾ ಅದರ ಉದ್ದೇಶಗಳಿಗಾಗಿ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಅಥವಾ ಅವನ ಸಿಬ್ಬಂದಿ ವರ್ಗದವರು ಪಡೆದ ಯಾವುದೇ ಮಾಹಿತಿ ಮತ್ತು ಅಂಥ ಮಾಹಿತಿಯ ಸಂಬಂಧದಲ್ಲಿ ದಾಖಲು ಮಾಡಿದ ಅಥವಾ ಸಂಗ್ರಹಿಸಿದ ಯಾವುದೇ ಸಾಕ್ಷ್ಯವನ್ನು ಗೌಪ್ಯವೆಂದು ಪರಿಗಣಿಸತಕ್ಕದ್ದು ಮತ್ತು ಅಂಥ ಮಾಹಿತಿಯ ಸಂಬಂಧವಾಗಿ ಸಾಕ್ಷ್ಯ ಕೊಡುವಂತೆ ಅಥವಾ ಹಾಗೆ ದಾಖಲು ಮಾಡಿಕೊಂಡ ಅಥವಾ ಸಂಗ್ರಹಿಸಲಾದ ಸಾಕ್ಷ್ಯವನ್ನು ಹಾಜರುಪಡಿಸುವಂತೆ ಲೋಕಾಯುಕ್ತ ಅಥವಾ ಉಪಲೋಕಾಯುಕ್ತ ಅಥವಾ ಯಾವೊಬ್ಬ ಸಾರ್ವಜನಿಕ ನೌಕರನನ್ನು ಒತ್ತಾಯಿಸಲು ಯಾವ ನ್ಯಾಯಾಲಯಕ್ಕೂ ಹಕ್ಕಿರತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿರುವುದು ಯಾವುದೂ,-

(ಎ) ಈ ಅಧಿನಿಯಮದ ಉದ್ದೇಶಗಳಿಗಾಗಿ ಅಥವಾ 12ನೇ ಪ್ರಕರಣದ ಮೇರೆಗಿನ ಅಂಥ ವರದಿಯ ಮೇಲೆ ಕೈಗೊಳ್ಳತಕ್ಕ ಯಾವುದೇ ಕ್ರಮದ ಅಥವಾ ವ್ಯವಹರಣೆಗಳ ಉದ್ದೇಶಗಳಿಗಾಗಿ,

(ಬಿ) ಸರ್ಕಾರಿ ರಹಸ್ಯಗಳ ಅಧಿನಿಯಮ, 1923ರ ಮೇರೆಗಿನ ಅಪರಾಧದ ಅಥವಾ ಭಾರತ ದಂಡಸಂಹಿತೆಯ ಮೇರೆಗೆ ಸುಳ್ಳು ಸಾಕ್ಷ್ಯವನ್ನು ನೀಡುವ ಅಥವಾ ಸೃಷ್ಟಿಸುವ ಅಪರಾಧದ ಯಾವುವೇ ವ್ಯವಹರಣೆಗಳ ಉದ್ದೇಶಗಳಿಗಾಗಿ ಅಥವಾ 14ನೇ ಪ್ರಕರಣದ ಮೇರೆಗಿನ ಯಾವುದೇ ಅಪರಾಧ ವಿಚಾರಣೆಯ ಅಥವಾ 17ನೇ ಪ್ರಕರಣದ ಮೇರೆಗಿನ ಯಾವುವೇ ವ್ಯವಹರಣೆಗಳ ಉದ್ದೇಶಗಳಿಗಾಗಿ, ಅಥವಾ

(ಸಿ) ನಿಯಮಿಸಬಹುದಾದಂಥ ಇತರ ಉದ್ದೇಶಗಳಿಗಾಗಿ,

(1) ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ಯಾವುದೇ ಮಾಹಿತಿಯನ್ನು ಅಥವಾ ಯಾವುವೇ ವಿವರಗಳನ್ನು ಹೊರಗೆಡುಹುವುದಕ್ಕೆ ಅನ್ವಯಿಸತಕ್ಕದ್ದಲ್ಲ.

**17. ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಉದ್ದೇಶಪೂರ್ವಕವಾಗಿ ಅಪಮಾನ ಮಾಡುವುದು ಅಥವಾ ತಡೆ ಉಂಟುಮಾಡುವುದು ಅಥವಾ ಅಪಖ್ಯಾತಿ ತರುವುದು.-** (1) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಈ ಅಧಿಯನಿಯಮದ ಮೇರೆಗೆ ಯಾವುದೇ ತನಿಖೆ ಅಥವಾ ವಿಚಾರಣೆ ನಡೆಸುವಾಗ ಅವನಿಗೆ ಉದ್ದೇಶಪೂರ್ವಕ ಅಪಮಾನ ಮಾಡುವ ಅಥವಾ ತಡೆಯನ್ನುಂಟು ಮಾಡುವ ಯಾವೊಬ್ಬ ವ್ಯಕ್ತಿಯು ದೋಷಸಿದ್ಧವಾದ ಅನಂತರ, ಆರು ತಿಂಗಳುಗಳ ಅವಧಿಗೆ ಕಡಿಮೆಯಲ್ಲದ ಆದರೆ ಒಂದು ವರ್ಷಕ್ಕೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಅಪಖ್ಯಾತಿ ತರಬೇಕೆಂದೆಣಿಸಿ ಆಡುವ ಅಥವಾ ಓದಬೇಕೆಂದು ಉದ್ದೇಶಿಸಿದ ಮಾತುಗಳ ಮೂಲಕ ಯಾವುದೇ ಹೇಳಿಕೆಯನ್ನು ಕೊಡುವ ಅಥವಾ ಪ್ರಕಟಿಸುವ ಅಥವಾ ಇತರ ಯಾವುದೇ ಕೃತ್ಯವನ್ನು ಮಾಡುವ ಯಾವೊಬ್ಬ ವ್ಯಕ್ತಿಯು ದೋಷಸಿದ್ಧವಾದ ತರುವಾಯ ಆರು ತಿಂಗಳುಗಳ ಅವಧಿಗೆ ಕಡಿಮೆಯಲ್ಲದ ಆದರೆ ಒಂದು ವರ್ಷಕ್ಕೆ ವಿಸ್ತರಿಸಬಹುದಾದ ಸಾದಾಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

(3) ದಂಡ ಪ್ರಕ್ರಿಯಾ ಸಂಹಿತೆ, 1973ರ 199ನೇ ಪ್ರಕರಣದ ಉಪಬಂಧಗಳು ಸದರಿ 199ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲಿಖಿತವಾಗಿರುವ ಅಪರಾಧದ ಸಂಬಂಧದಲ್ಲಿ ಅನ್ವಯಿಸುವ ಹಾಗೆಯೇ (1)ನೇ ಉಪಪ್ರಕರಣದ ಅಥವಾ (2)ನೇ ಉಪ ಪ್ರಕರಣದ ಮೇರೆಗಿನ ಅಪರಾಧದ ಸಂಬಂಧದಲ್ಲಿ ಲೋಕಾಯುಕ್ತ ಅಥವಾ ಸಂಬಂಧಪಟ್ಟ ಉಪಲೋಕಾಯುಕ್ತನ ಪೂರ್ವ ಮಂಜೂರಾತಿಯಿಲ್ಲದೆ ಅಂಥ ಅಪರಾಧದ ಸಂಬಂಧವಾಗಿ ಸರ್ಕಾರಿ ಅಭಿಯೋಜಕ ಯಾವುದೇ ಫಿರ್ಯಾದು ಮಾಡತಕ್ಕದ್ದಲ್ಲವೆಂಬ ಮಾರ್ಪಾಡಿಗೆ ಒಳಪಟ್ಟು ಅನ್ವಯವಾಗತಕ್ಕದ್ದು.

(4) ನ್ಯಾಯಾಲಯವು ತೀರ್ಪಿನಲ್ಲಿ ನಮೂದಿಸಬೇಕಾದ ಯಾವುವೇ ಸಾಕಷ್ಟು ಮತ್ತು ವಿಶೇಷ ಕಾರಣಗಳಿಗಾಗಿ ಕಡಿಮೆ ಮಾಡಿದ ಕಾರಾವಾಸದ ಅಥವಾ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸಬಹುದು.

[1][17ಎ. **ಅಪಮಾನಕ್ಕಾಗಿ ಶಿಕ್ಷೆ ವಿಧಿಸಲು ಅಧಿಕಾರ.**- ಲೋಕಾಯುಕ್ತ ಅಥವಾ ಉಪಲೋಕಾಯುಕ್ತರು, ಅಪಮಾನದ ಬಗ್ಗೆ ಉಚ್ಚ ನ್ಯಾಯಾಲಯಕ್ಕಿರುವಂಥ ಮತ್ತು ಚಲಾಯಿಸುವಂಥ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ನ್ಯಾಯಾಲಯಗಳ ನಿಂದೆ ಅಧಿನಿಯಮ, 1971ರ (1971ರ ಕೇಂದ್ರಾಧಿನಿಯಮ 70) ಉಪಬಂಧಗಳು ಉಚ್ಚನ್ಯಾಯಾಲಯಕ್ಕೆ ಅವುಗಳಲ್ಲಿ ಮಾಡಲಾದ ಉಲ್ಲೇಖಗಳು, ಸಂಧರ್ಭಾನುಸಾರ, ಲೋಕಾಯುಕ್ತ ಮತ್ತು ಉಪಲೋಕಾಯುಕ್ತರ ಬಗೆಗಿನ ಉಲ್ಲೇಖವನ್ನು ಒಳಗೊಂಡಿದೆಯೆಂದು ಅರ್ಥೈಸತಕ್ಕದ್ದೆಂಬ ಮಾರ್ಪಾಟಿಗೊಳಪಟ್ಟು ಪರಿಣಾಮಕಾರಿಯಾಗಿರತಕ್ಕದ್ದು.][1]

1. 1988ರ ಅಧಿನಿಯಮ ಸಂಖ್ಯೆ: 1ರ ಮೂಲಕ ದಿನಾಂಕ: 25.02.1988ರಿಂದ ಸೇರಿಸಲಾಗಿದೆ.

**18. ರಕ್ಷಣೆ.**- (1) ಈ ಅಧಿನಿಯಮದ ಮೇರೆಗೆ ತಮಗೆ ವಿಧಿಸಿರುವ ಕರ್ತವ್ಯಗಳನ್ನು ನೆರವೇರಿಸುವಾಗ ಅಥವಾ ನೆರವೇರಿಸಲು ಉದ್ದೇಶಿಸಿರುವಾಗ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕೃತ್ಯದ ಬಗ್ಗೆ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ವಿರುದ್ಧ, ಅಥವಾ 15ನೇ ಪ್ರಕರಣದಲ್ಲಿ ಉಲ್ಲಿಖಿತವಾದ ಯಾವೊಬ್ಬ ಅಧಿಕಾರಿಯ, ಉದ್ಯೋಗಿಯ, ಏಜೆನ್ಸಿಯ ಅಥವಾ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆ ಇರತಕ್ಕದ್ದಲ್ಲ.

(2) ಕಾರ್ಯ ವಿಧಾನದಲ್ಲಿ ಕೊರತೆಯಿರುವ ಕಾರಣದಿಂದ ಲೋಕಾಯುಕ್ತ ಅಥವಾ ಉಪಲೋಕಾಯುಕ್ತರ ಸಂಬಂಧದಲ್ಲಿಯ ಯಾವುವೇ ವ್ಯವಹರಣೆಗಳು ಸರಿಯಾದ ಕ್ರಮದಲ್ಲಿಲ್ಲವೆಂದು ತಿಳಿಯತಕ್ಕದ್ದಲ್ಲ ಮತ್ತು ಅಧಿಕಾರ ವ್ಯಾಪ್ತಿಯ ಕಾರಣದ ಹೊರತಾಗಿ ಲೋಕಾಯುಕ್ತ ಅಥವಾ ಉಪಲೋಕಾಯುಕ್ತರ ಯಾವುದೇ ವ್ಯವಹರಣೆಗಳು ಅಥವಾ ತೀರ್ಮಾನವು ಸಾಮಾನ್ಯ ಸಿವಿಲ್ ಅಧಿಕಾರ ವ್ಯಾಪ್ತಿಯ ಯಾವುದೇ ನ್ಯಾಯಾಲಯದಲ್ಲಿ ಆಕ್ಷೇಪಕ್ಕೆ, ಪುನರೀಕ್ಷಣೆಗೆ, ರದ್ದಿಯಾತಿಗೆ ಗುರಿಯಾಗತಕ್ಕದ್ದಲ್ಲ ಅಥವಾ ಪ್ರಶ್ನಿತವಾಗತಕ್ಕದ್ದಲ್ಲ.

**19. ಉಪಲೋಕಾಯುಕ್ತನಿಗೆ ಹೆಚ್ಚಿನ ಪ್ರಕಾರ್ಯಗಳ ಪ್ರದಾನ.**- (1) ಸರ್ಕಾರವು ಲಿಖಿತ ಆದೇಶದ ಮೂಲಕ ಮತ್ತು ಉಪಲೋಕಾಯುಕ್ತನ ಜೊತೆ ಸಮಾಲೋಚಿಸಿದ ತರುವಾಯ, ಉಪ ಲೋಕಾಯುಕ್ತನ ಶಿಫಾರಸುಗಳ ಮುಂದುವರಿಕೆಯಲ್ಲಿ ಅಥವಾ ಅನ್ಯಥಾ ಸರ್ಕಾರಿ ನೌಕರರ ಮತ್ತು 2ನೇ ಪ್ರಕರಣದ (12)ನೇ ಖಂಡದ (ಜಿ) ಬಾಬಿನಲ್ಲಿ ಉಲ್ಲೇಖಿಸಿದ [1][ಆದರೆ 7ನೇ ಪ್ರಕರಣದ (1)ನೇ ಉಪಪ್ರಕರಣದ (ii) ಮತ್ತು (iv)ನೇ ಖಂಡಗಳ ಅಡಿಯಲ್ಲಿ ಬರದ][1] ವ್ಯಕ್ತಿಗಳ ವಿರುದ್ಧ ಪ್ರಾರಂಭಿಸಿದ ಶಿಸ್ತಿನ ಅಥವಾ [2][ಪ್ರಕರಣ 26ರ ಉಪ ಪ್ರಕರಣ (3)ರ ಮೇರೆಗೆ ವರ್ಗಾಯಿಸಲಾದ ಅಥವಾ ಇತರ][2] ವ್ಯವಹರಣೆಗಳ ಸಂಬಂಧದಲ್ಲಿ ನಿಯಮಿಸಬಹುದಾದ ರೀತಿಯಲ್ಲಿ ಮತ್ತು 15ನೇ ಪ್ರಕರಣದಲ್ಲಿ ಉಲ್ಲಿಖಿತರಾದ ಅಧಿಕಾರಿಗಳು, ಉದ್ಯೋಗಿಗಳು, ಏಜೆನ್ಸಿಗಳ ಮೂಲಕ ವಿಚಾರಣೆಗಳನ್ನು ನಡೆಸಲು ಉಪಲೋಕಾಯುಕ್ತನಿಗೆ ಅಧಿಕಾರಿಗಳನ್ನು ಪ್ರದಾನ ಮಾಡಬಹುದು.

1. 1988ರ ಅಧಿನಿಯಮ ಸಂಖ್ಯೆ: 1ರ ಮೂಲಕ ದಿನಾಂಕ: 25.02.1988ರಿಂದ ಸೇರಿಸಲಾಗಿದೆ.
2. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

(2) (1)ನೇ ಉಪಪ್ರಕರಣದ ಮೇರೆಗೆ ಉಪಲೋಕಾಯುಕ್ತನಿಗೆ ಅಧಿಕಾರಗಳನ್ನು ಪ್ರದಾನ ಮಾಡಿರುವಲ್ಲಿ ಉಪಲೋಕಾಯುಕ್ತನು, ಸಂದರ್ಭಾನುಸಾರ ದೂರು, ಅಥವಾ ಆಪಾದನೆಯನ್ನೊಳಗೊಂಡ [1][ಒಂದು ಫಿರ್ಯಾದಿನ ಮೇಲೆ][1] ಯಾವುದೇ ತನಿಖೆಯನ್ನು ಮಾಡುವ ಸಂದರ್ಭದಲ್ಲಿ ಯಾವ ಅಧಿಕಾರಗಳನ್ನು ಚಲಾಯಿಸುತ್ತಿದ್ದನೋ ಮತ್ತು ಯಾವ ಪ್ರಕಾರ್ಯಗಳನ್ನು ನಿರ್ವಹಿಸುತ್ತಿದ್ದನೋ ಅದೇ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅವೇ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳು ಅದಕ್ಕನುಸಾರವಾಗಿ ಅನ್ವಯವಾಗತಕ್ಕದ್ದು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

**20. ಸುಳ್ಳು ಫಿರ್ಯಾದಿಗಾಗಿ ಅಭಿಯೋಜನೆ.**- (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಸುಳ್ಳು, ಕ್ಷುಲ್ಲಕ ಅಥವಾ ಕಿರುಕುಳಕಾರಿಯಾದ ಯಾವುದೇ ಫಿರ್ಯಾದನ್ನು ಈ ಅಧಿನಿಯಮದ ಮೇರೆಗೆ ಮಾಡುವ ಯಾವೊಬ್ಬ ವ್ಯಕ್ತಿಯು ದೋಷ ಸಿದ್ಧಿಯಾದ ತರುವಾಯ, ಆರು ತಿಂಗಳುಗಳಿಗೆ ಕಡಿಮೆಯಲ್ಲದ ಆದರೆ ಮೂರು ವರ್ಷಗಳವರೆಗೆ

ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಮಹಾನಗರ ಮ್ಯಾಜಿಸ್ಟ್ರೇಟ್ ಅಥವಾ ಮೊದಲನೇ ವರ್ಗದ ನ್ಯಾಯಿಕ ಮ್ಯಾಜಿಸ್ಟ್ರೇಟ್‌ನ ನ್ಯಾಯಾಲಯದ ಹೊರತಾಗಿ ಇತರ ಯಾವುದೇ ನ್ಯಾಯಾಲಯವು (1)ನೇ ಉಪಪ್ರಕರಣದ ಮೇರೆಗಿನ ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ.

[1][(2ಎ) ಯಾವ ವ್ಯಕ್ತಿಯ ವಿರುದ್ಧ ಸುಳ್ಳು, ಕ್ಷುಲ್ಲಕ ಅಥವಾ ಕಿರುಕುಳಕಾರಿಯಾದ ಫಿರ್ಯಾದನ್ನು ಮಾಡಲಾಗಿದೆಯೋ ಆ ವ್ಯಕ್ತಿಯು, ಸಂದರ್ಭಾನುಸಾರ, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ಪೂರ್ವ ಮಂಜೂರಾತಿಯನ್ನು ಪಡೆದು ನೀಡಿದ ಫಿರ್ಯಾದಿನ ಹೊರತು ಯಾವುದೇ ಅಂಥ ನ್ಯಾಯಾಲಯವು ಉಪ-ಪ್ರಕರಣ (1)ರ ಮೇರೆಗಿನ ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ.][1]

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಸೇರಿಸಲಾಗಿದೆ.

(3) (1)ನೇ ಉಪಪ್ರಕರಣದ ಮೇರೆಗಿನ ಅಪರಾಧದ ಸಂಬಂಧದಲ್ಲಿ ಸಾರ್ವಜನಿಕ ಅಭಿಯೋಜಕರು ಅಭಿಯೋಜನೆ ನಡೆಸತಕ್ಕದ್ದು ಮತ್ತು ಅಂತಹ ಅಭಿಯೋಜನೆಗೆ ಸಂಬಂಧಪಟ್ಟ ಎಲ್ಲ ವೆಚ್ಚಗಳನ್ನು ರಾಜ್ಯ ಸರ್ಕಾರವು ಭರಿಸತಕ್ಕದ್ದು.

**21. ಪ್ರತ್ಯಾಯೋಜಿಸಲು ಅಧಿಕಾರ.**- ಉಪಲೋಕಾಯುಕ್ತನು, ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ 19ನೇ ಪ್ರಕರಣದ ಮೂಲಕ ಪ್ರದತ್ತವಾದ ಪ್ರಕಾರ್ಯಗಳನ್ನು ಮತ್ತು ಅಧಿಕಾರಗಳನ್ನು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ 15ನೇ ಪ್ರಕರಣದಲ್ಲಿ ಉಲ್ಲೇಖಿಸಿದಂಥ ಅಧಿಕಾರಿಗಳು, ಉದ್ಯೋಗಿಗಳು ಅಥವಾ ಏಜೆನ್ಸಿಗಳು ಸಹ ಚಲಾಯಿಸಬಹುದೆಂದು ಅಥವಾ ನಿರ್ವಹಿಸಬಹುದೆಂದು ನಿರ್ದೇಶಿಸಬಹುದು.

**22. ಸಾರ್ವಜನಿಕ ನೌಕರರು ಸ್ವತ್ತಿನ ಹೇಳಿಕೆಯನ್ನು ಒಪ್ಪಿಸುವುದು.**- (1) ಸರ್ಕಾರಿ ನೌಕರರನ್ನುಳಿದು 7ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪ್ರತಿಯೊಬ್ಬ ಸಾರ್ವಜನಿಕ ನೌಕರನು ಈ ಅಧಿನಿಯಮದ ಪ್ರಾರಂಭದ ತರುವಾಯ ಮೂರು ತಿಂಗಳೊಳಗೆ ಮತ್ತು ಆ ತರುವಾಯ ಪ್ರತಿ ವರ್ಷ ಜೂನ್ ತಿಂಗಳ 30ರೊಳಗೆ [1][ತನ್ನ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಹಾಗೂ][1] ತನ್ನ ಕುಟುಂಬದ ಸದಸ್ಯರುಗಳ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಹೇಳಿಕೆಯನ್ನು ನಿಯಮಿಸಲಾದ ನಮೂನೆಯಲ್ಲಿ ಲೋಕಾಯುಕ್ತನಿಗೆ ಸಲ್ಲಿಸತಕ್ಕದ್ದು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

(2) (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಅಂಥ ಯಾವೊಬ್ಬ ಸಾರ್ವಜನಿಕ ನೌಕರನಿಂದ ಲೋಕಾಯುಕ್ತನು ಯಾವುದೇ ಹೇಳಿಕೆಯನ್ನು ಪಡೆಯದಿದ್ದರೆ ಲೋಕಾಯುಕ್ತನು ಆ ಕುರಿತು ಸಕ್ಷಮ ಪ್ರಾಧಿಕಾರಿಗೆ ವರದಿ ಮಾಡತಕ್ಕದ್ದು ಮತ್ತು ವರದಿಯ ಒಂದು ಪ್ರತಿಯನ್ನು ಸಂಬಂಧಪಟ್ಟ ಸಾರ್ವಜನಿಕ ನೌಕರನಿಗೆ ಕಳಿಸಿಕೊಡತಕ್ಕದ್ದು ಅಂಥ ವರದಿಯ ಎರಡು ತಿಂಗಳೊಳಗೆ ಸಂಬಂಧಪಟ್ಟ ಸಾರ್ವಜನಿಕ ನೌಕರನು [1][ತನ್ನ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಅಂಥ ಹೇಳಿಕೆಗಳನ್ನು ಸಲ್ಲಿಸದಿದ್ದರೆ, ಲೋಕಾಯುಕ್ತನು ಅಂಥ ಸಾರ್ವಜನಿಕ ನೌಕರನ][1] ಹೆಸರುಗಳನ್ನು ರಾಜ್ಯದಲ್ಲಿ ವ್ಯಾಪಕ ಪ್ರಸಾರದ ಮೂರು ವೃತ್ತಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು.

[1][***ವಿವರಣೆ***][1].- ಈ ಪ್ರಕರಣದಲ್ಲಿ 'ಸಾರ್ವಜನಿಕ ನೌಕರನ ಕುಟುಂಬ ಎಂದರೆ ಗಂಡ ಅಥವಾ ಹೆಂಡತಿ ಮತ್ತು [1][ಸಾರ್ವಜನಿಕ ನೌಕರನ ಮೇಲೆ ಅವನ ಎಂಥ ಮಕ್ಕಳು ಮತ್ತು ತಂದೆತಾಯಿಯರು ಆಶ್ರಿತರಾಗಿರುವರೋ ಅಂಥವರು.][1]

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

**23. ನಿಯಮಗಳ ರಚನಾಧಿಕಾರ.**- (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಉಪಬಂಧಗಳ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ ಅಂಥ ನಿಯಮಗಳು ಈ ಕೆಳಗಿನವುಗಳ ಬಗ್ಗೆ ಉಪಬಂಧ ಕಲ್ಪಿಸಬಹುದು: -

(ಎ) 2ನೇ ಪ್ರಕರಣದ (4)ನೇ ಖಂಡದ (ಡಿ) ಉಪಖಂಡದ ಮೇರೆಗೆ ನಿಯಮಿಸಬೇಕಾದ ಪ್ರಾಧಿಕಾರಗಳು;

(ಬಿ) ಲೋಕಾಯುಕ್ತ ಮತ್ತು ಉಪಲೋಕಾಯುಕ್ತನಿಗೆ ಸಂದೇಯವಿರುವ ಭತ್ಯೆಗಳು ಮತ್ತು ನಿವೃತ್ತಿ ವೇತನ ಮತ್ತು ಇತರ ಸೇವಾ ಷರತ್ತುಗಳು;

(ಸಿ) [1][ಒಂದು ಫಿರ್ಯಾದನ್ನು][1] ಮಾಡಬಹುದಾದ ನಮೂನೆ ಮತ್ತು ವಿಧಾನ;

(ಡಿ) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು 11ನೇ ಪ್ರಕರಣದ (2)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗೆ ಚಲಾಯಿಸಬಹುದಾದ ಸಿವಿಲ್ ನ್ಯಾಯಾಲಯದ ಅಧಿಕಾರಗಳು;

(ಇ) 15ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ಸಿಬ್ಬಂದಿ ಮತ್ತು ಉದ್ಯೋಗಿಗಳ ವೇತನ, ಭತ್ಯೆ, ಸೇವಾ ಭರ್ತಿ ಮತ್ತು ಇತರ ಸೇವಾ ಷರತ್ತುಗಳು;

(ಎಫ್) [1][ಪ್ರಕರಣ 19ರ ಮೇರೆಗೆ ಸರ್ಕಾರಿ ನೌಕರರ ವಿರುದ್ಧ ತನಿಖೆಗಳು;][1]

(ಜಿ) ಇತರ ಯಾವ ವಿಷಯದ ಬಗ್ಗೆ ಈ ಅಧಿನಿಯಮದ ಮೇರೆಗೆ ನಿಯಮಗಳನ್ನು ರಚಿಸಬೇಕೋ [1][ಅಥವಾ ಅಗತ್ಯವಿವೆಯೋ][1], ಆ ವಿಷಯಗಳು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

[1][(2ಎ) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮವನ್ನು ಪೂರ್ವಾನ್ವಯವಾಗಿ ಪರಿಣಾಮಕಾರಿಯಾಗುವಂತೆ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದಾಗ ಅಂಥ ನಿಯಮವನ್ನು ರಚಿಸಬೇಕಾಗಿಬಂದ ಕಾರಣಗಳನ್ನು,ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಇರಿಸಲಾದ ಹೇಳಿಕೆಯಲ್ಲಿ ನಿರ್ದಿಷ್ಟಪಡಿಸತಕ್ಕದ್ದು. (3)ನೇ ಉಪಪ್ರಕರಣದ ಅಡಿಯಲ್ಲಿ ಮಾಡಲಾದ ಯಾವುದೇ ಮಾರ್ಪಾಡಿಗೆ ಒಳಪಟ್ಟು, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವು ಈ ಅಧಿನಿಯಮದಿಂದ ಅಧಿನಿಯಮಿತವಾದಂತೆ ಪರಿಣಾಮಕಾರಿಯಾಗಿರತಕ್ಕದ್ದು][1]

1. 1991ರ ಅಧಿನಿಯಮ ಸಂಖ್ಯೆ: 30ರ ಮೂಲಕ ದಿನಾಂಕ: 08.08.1991ರಿಂದ ಪ್ರತಿಸ್ಥಾಪಿಸಲಾಗಿದೆ.

(3) ಈ ಪ್ರಕರಣದ ಕೆಳಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ಮೇಲೆ ಎಷ್ಟು ಬೇಗನೆ ಸಾಧ್ಯವೋ ಅಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಒಂದೇ ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಇರಿಸತಕ್ಕದ್ದು, ಮತ್ತು ಹಿಂದೆ ಹೇಳಿದ, ಅಧಿವೇಶನದ ಅಥವಾ ಒಂದಾದ ಮೇಲೊಂದು ಬರುವ ಅಧಿವೇಶನಗಳ, ನಿಕಟೋತ್ತರ ಅಧಿವೇಶನ ಮುಗಿಯುವುದಕ್ಕೂ ಮೊದಲು, ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳೂ ಒಪ್ಪಿದರೆ ಆ ನಿಯಮವು ರಾಜ್ಯಸರ್ಕಾರದ ಸರ್ಕಾರಿ ರಾಜ್ಯಪತ್ರದಲ್ಲಿ ಮಾರ್ಪಾಟನ್ನು ಅಥವಾ ರದ್ದಿಯಾತಿಯನ್ನು ಅಧಿಸೂಚನೆ ಮಾಡಿದ ದಿನಾಂಕದಿಂದ, ಸಂದರ್ಭಾನುಸಾರ, ಅಂಥ ಮಾರ್ಪಾಟು ಆದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದರೆ ಅಂಥ ಮಾರ್ಪಾಟು ಅಥವಾ ರದ್ದಿಯಾತಿ ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಊರ್ಜಿತತೆಗೆ ಪ್ರತಿಕೂಲವಾಗಿ ಇರತಕ್ಕದ್ದಲ್ಲ.

**24. ಸಂದೇಹಗಳ ನಿವಾರಣೆ.**- (1) ಸಂದೇಹಗಳ ನಿವಾರಣೆಗಾಗಿ,-

(ಎ) ಭಾರತ ದಂಡ ಸಂಹಿತೆಯ 19ನೇ ಪ್ರಕರಣದಲ್ಲಿ ಪರಿಭಾಷಿಸಿದ ಯಾವೊಬ್ಬ ನ್ಯಾಯಾಧೀಶ;

(ಬಿ) ಭಾರತದಲ್ಲಿಯ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ನ್ಯಾಯಾಲಯದ ಯಾವೊಬ್ಬ ಅಧಿಕಾರಿ ಅಥವಾ ನೌಕರ;

(ಸಿ) ಕರ್ನಾಟಕ ಮಹಾಲೇಖಾಪಾಲ;

(ಡಿ) ಸಂವಿಧಾನದ 324ನೇ ಅನುಚ್ಛೇದದಲ್ಲಿ ಉಲ್ಲೇಖಿತವಾದ ಮುಖ್ಯ ಚುನಾವಣಾ ಕಮೀಷನರು, ಚುನಾವಣಾ ಕಮೀಷನರುಗಳು ಮತ್ತು ಪ್ರಾದೇಶಿಕ ಕಮೀಷನರುಗಳು ಹಾಗೂ ಕರ್ನಾಟಕ ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿ;

(ಇ) ಕರ್ನಾಟಕ ವಿಧಾನಸಭೆಯ ಅಧ್ಯಕ್ಷ ಅಥವಾ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ; ಮತ್ತು

(ಎಫ್) ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಅಥವಾ ಒಬ್ಬ ಸದಸ್ಯನು,

–ಕೈಗೊಂಡ ಅಥವಾ ಇವರ ಅನುಮೋದನೆಯಿಂದ ಕೈಗೊಂಡ ಯಾವುದೇ ಕ್ರಮದ ಬಗ್ಗೆ ತನಿಖೆ ನಡೆಸಲು ಲೋಕಾಯುಕ್ತ ಅಥವಾ ಉಪ ಲೋಕಾಯುಕ್ತನಿಗೆ ಈ ಅಧಿನಿಯಮದಲ್ಲಿರುವುದಾವುದೂ ಅಧಿಕಾರ ನೀಡುತ್ತದೆಂದು ಅರ್ಥ ಮಾಡತಕ್ಕದ್ದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

(2) ಈ ಅಧಿನಿಯಮದ ಮೇರೆಗೆ ಫಿರ್ಯಾದು ಮಾಡುವ ವ್ಯಕ್ತಿಗೆ ಯಾವುದೇ ಕ್ರಮದ ಸಂಬಂಧದಲ್ಲಿ ಇತರ ಯಾವುದೇ ಅಧಿನಿಯಮ ಅಥವಾ ನಿಯಮ ಅಥವಾ ಕಾನೂನಿನ ಮೇರೆಗೆ ಅಪೀಲು, ಪರಿಷ್ಕರಣ, ಪುನರೀಕ್ಷಣೆ ಅಥವಾ ಇತರ ಯಾವುದೇ ರೀತಿಯಲ್ಲಿ ದೊರೆಯುವ ಪರಿಹಾರದ ಜೊತೆಗೆ ಈ ಅಧಿನಿಯಮದ ಉಪಬಂಧಗಳು ಇರತಕ್ಕದ್ದು ಮತ್ತು ಈ ಅಧಿನಿಯಮದಲ್ಲಿರುವ ಯಾವುದೂ ಅಂಥ ಪರಿಹಾರ ಪಡೆಯಲು ಅಂಥ ವ್ಯಕ್ತಿಗಿರುವ ಹಕ್ಕನ್ನು ಪರಿಮಿತಿಗೊಳಪಡಿಸತಕ್ಕದ್ದಲ್ಲ ಅಥವಾ ಭಾಧಿಸತಕ್ಕದ್ದಲ್ಲ.

**25. ತೊಂದರೆಗಳ ನಿವಾರಣೆ.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ರಾಜ್ಯಪಾಲರು ಆದೇಶದ ಮೂಲಕ,–

(1) ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು;

(2) ಸರ್ಕಾರದ ಅಥವಾ ಕರ್ನಾಟಕ ರಾಜ್ಯ ಜಾಗೃತ ಆಯೋಗ ನಿಯಮಗಳು, 1980ರ ಮೇರೆಗೆ ರಚಿತವಾದ ಕರ್ನಾಟಕ ರಾಜ್ಯ ಜಾಗೃತ ಆಯೋಗವೂ ಸೇರಿದಂತೆ ಇತರ ಯಾವುದೇ ಪ್ರಾಧಿಕಾರದ ಮುಂದೆ ಇತ್ಯರ್ಥವಾಗದೇ ಇರುವ ಸರ್ಕಾರಿ ನೌಕರರ ಮತ್ತು 2ನೇ ಪ್ರಕರಣದ (12)ನೇ ಖಂಡದ (ಜಿ) ಬಾಬಿನಲ್ಲಿ ಉಲ್ಲೇಖಿಸಿದ ವ್ಯಕ್ತಿಗಳ ವಿರುದ್ಧದ ವಿಚಾರಣೆ ಮತ್ತು ತನಿಖೆಗಳನ್ನು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಮುಂದುವರಿಸಿಕೊಂಡು ಹೋಗುವುದಕ್ಕಾಗಿ,

–ತಾನು ಅವಶ್ಯಕವೆಂದು ಭಾವಿಸುವ ಅಥವಾ ಯುಕ್ತವೆಂದು ಬಾವಿಸುವಂಥ ಉಪಬಂಧವನ್ನು ಮಾಡಬಹುದು.

**26. ನಿರಸನ ಮತ್ತು ಉಳಿಸುವಿಕೆಗಳು.–** (1) ಕರ್ನಾಟಕ ರಾಜ್ಯ ಜಾಗೃತ ಆಯೋಗದ ನಿಯಮಗಳು, 1980 ಮತ್ತು ಕರ್ನಾಟಕ ಸಾರ್ವಜನಿಕ ಪ್ರಾಧಿಕಾರಗಳ (ಉದ್ಯೋಗಿಗಳ ವಿರುದ್ಧ ಶಿಸ್ತು ವ್ಯವಹರಣೆಗಳು) ಅಧಿನಿಯಮ, 1982(ಕರ್ನಾಟಕ ಅಧಿನಿಯಮ 1982ರ 31) ಇವುಗಳು ಈ ಮೂಲಕ ನಿರಸಿತವಾಗಿವೆ.

(2) ಹಾಗೆ ನಿರಸಿತವಾಗಿದ್ದರೂ, ಸದರಿ ನಿಯಮಗಳ ಅಥವಾ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕೃತ್ಯ ಅಥವಾ ಕಾರ್ಯವು, ಸದರಿ ಅಧಿನಿಯಮದ ಮೇರೆಗೆ ಮಾಡಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಅದನ್ನು ಮುಂದುವರಿಸಬಹುದು ಮತ್ತು ಪೂರ್ಣಗೊಳಿಸಬಹುದು.

(3) ಕರ್ನಾಟಕ ರಾಜ್ಯ ಜಾಗೃತ ಆಯೋಗದ ನಿಯಮಗಳು, 1980ರ ಮೇರೆಗೆ ರಚಿತವಾದ ಕರ್ನಾಟಕ ರಾಜ್ಯ ಜಾಗೃತ ಆಯೋಗದ ಮುಂದೆ ಇತ್ಯರ್ಥವಾಗದೆ ಉಳಿದು ವಿಲೆಯಾಗದಿರುವ ಎಲ್ಲ ವಿಚಾರಣೆಗಳು ಮತ್ತು ತನಿಖೆಗಳು ಮತ್ತು ಇತರ ಶಿಸ್ತು ವ್ಯವಹರಣೆಗಳು ಉಪಲೋಕಾಯುಕ್ತನಿಗೆ ವರ್ಗಾವಣೆಯಾಗತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಅವನ ಮುಂದೆ ಅವುಗಳನ್ನು ಪ್ರಾರಂಭಿಸಿದ್ದರೆ ಹೇಗೋ ಹಾಗೆ ಅವುಗಳು ಮುಂದುವರಿಯತಕ್ಕದ್ದು.

(4) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಪ್ರಾರಂಭದಲ್ಲಿ ಲೋಕಾಯುಕ್ತನ ಸಿಬ್ಬಂದಿಯು, ಕರ್ನಾಟಕ ರಾಜ್ಯ ಜಾಗೃತ ಆಯೋಗದ ನಿಯಮಗಳು, 1980ರ ಮೇರೆಗೆ ರಚಿತವಾದ ಕರ್ನಾಟಕ ರಾಜ್ಯ ಜಾಗೃತ ಆಯೋಗದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿದ್ದ ಕಾರ್ಯದರ್ಶಿ, ಮತ್ತು ಇತರ ಅಧಿಕಾರಿಗಳ ಮತ್ತು ಉದ್ಯೋಗಿಗಳ ಹುದ್ದೆಗಳನ್ನು ಒಳಗೊಂಡಿರತಕ್ಕದ್ದು ಮತ್ತು ರಾಜ್ಯ ಜಾಗೃತ ಆಯೋಗದಲ್ಲಿ ಸಂವಾದಿ ಹುದ್ದೆಗಳನ್ನು ಹೊಂದಿರುವ ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳು ಮತ್ತು ಉದ್ಯೋಗಿಗಳನ್ನು ವರ್ಗಾವಣೆ ಮೂಲಕ ಸದರಿ ಹುದ್ದೆಗಳಿಗೆ ನೇಮಕಗಳನ್ನು ಈ ಮೂಲಕ ಮಾಡಲಾಗಿದೆ. ಸದರಿ ಕಾರ್ಯದರ್ಶಿ, ಅಧಿಕಾರಿಗಳು ಮತ್ತು ಇತರ ಉದ್ಯೋಗಿಗಳ ವೇತನ, ಭತ್ಯೆಗಳು ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು, ಬದಲಾವಣೆ ಆಗುವವರೆಗೆ ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಅವರು ಯಾವುದಕ್ಕೆ ಹಕ್ಕುಳ್ಳವರಾಗಿದ್ದರೋ ಅದೇ ಆಗಿರತಕ್ಕದ್ದು.

**ಮೊದಲನೇ ಅನುಸೂಚಿ**

(ಪ್ರಕರಣ 3 (3) ನೋಡಿ)

....................................................ಎಂಬ ಹೆಸರಿನವನಾದ ನಾನು, ಲೋಕಾಯುಕ್ತನಾಗಿ ನೇಮಕಗೊಂಡಿದ್ದು, ಕಾನೂನಿನ ಮೂಲಕ ಸ್ಥಾಪಿತವಾದ ಭಾರತ ಸಂವಿಧಾನದ ಬಗ್ಗೆ ನಿಜ ಶ್ರದ್ಧೆ ಮತ್ತು ನಿಷ್ಠೆಯನ್ನು ತಳೆಯುತ್ತೇನೆಂದೂ ನನ್ನ ಪದದ ಕರ್ತವ್ಯಗಳನ್ನು ಸರಿಯಾಗಿ, ಶ್ರದ್ಧಾಪೂರ್ವಕವಾಗಿ ಮತ್ತು ನನ್ನ ಪೂರ್ಣ ಸಾಮರ್ಥ್ಯ, ಜ್ಞಾನ ಮತ್ತು ವಿವೇಕದಿಂದ ಯಾವುದೇ ಭಯ, ಪಕ್ಷಪಾತ, ರಾಗದ್ವೇಷವಿಲ್ಲದೆ ಪಾಲನೆ ಮಾಡುತ್ತೇನೆಂದೂ ಭಗವಂತನ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ/ಸತ್ಯನಿಷ್ಠೆಯಿಂದ ಪ್ರತಿಜ್ಞೆ ಮಾಡುತ್ತೇನೆ.

**ಎರಡನೇ ಅನುಸೂಚಿ**

(ಪ್ರಕರಣ 8 (1) (ಎ) ನೋಡಿ)

(ಎ) ರಾಜ್ಯದ ಭದ್ರತೆಗೆ ಸಂಬಂಧಿಸಿದ ಅಪರಾಧಗಳ ತನಿಖೆಯ ಉದ್ದೇಶಕ್ಕಾಗಿ ಕೈಗೊಂಡ ಕ್ರಮ.

(ಬಿ) ಒಂದು ವಿಷಯವು ನ್ಯಾಯಾಲಯಕ್ಕೆ ಹೋಗತಕ್ಕದ್ದೆ ಅಲ್ಲವೇ ಎಂಬುದನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿದ ಅಧಿಕಾರಗಳ ಚಲಾವಣೆಯಲ್ಲಿ ಕೈಗೊಂಡ ಕ್ರಮ.

(ಸಿ) ಕರಾರಿನ ಬಾಧ್ಯತೆಗಳನ್ನು ಪೂರೈಸುವಲ್ಲಿ ಉಂಟಾದ ಪೀಡನೆ ಅಥವಾ ಅತಿ ವಿಳಂಬವನ್ನು ಫಿರ್ಯಾದಿಯು ಆರೋಪಿಸಿರುವಲ್ಲಿ ಹೊರತು ಗ್ರಾಹಕರ ಅಥವಾ ಸರಬರಾಜುದಾರರೊಡನೆ ಆಡಳಿತದ ವಾಣಿಜ್ಯ ಸಂಬಂಧಗಳನ್ನು ಮಾತ್ರವೇ ನಿಯಂತ್ರಿಸುವ ಒಂದು ಒಪ್ಪಂದದ ಷರತ್ತುಗಳಿಂದ ಉದ್ಭವಿಸುವ ವಿಷಯಗಳಲ್ಲಿ ತೆಗೆದುಕೊಳ್ಳಲಾದ ಕ್ರಮ.

(ಡಿ) ನಿವೃತ್ತಿ ವೇತನ, ಉಪದಾನ, ಭವಿಷ್ಯನಿಧಿಯ ಕ್ಲೇಮುಗಳಿಗೆ ಅಥವಾ ನಿವೃತ್ತಿ, ಪದಚ್ಯುತಿ ಅಥವಾ ಸೇವಾ ಸಮಾಪನದಿಂದ ಉದ್ಭವಿಸುವ ಯಾವುದೇ ಕ್ಲೇಮುಗಳಿಗೆ ಸಂಬಂಧಿಸಿದ ಕ್ರಮವನ್ನು ಒಳಗೊಳ್ಳದ ಸಾರ್ವಜನಿಕ ನೌಕರರ ನೇಮಕಗಳು, ಪದಚ್ಯುತಿ, ವೇತನ, ಶಿಸ್ತು, ನಿವೃತ್ತಿ ವಯಸ್ಸು ಅಥವಾ ಅವರ ಸೇವಾ ಷರತ್ತುಗಳಿಗೆ ಸಂಬಂಧಿಸಿದ ಇತರ ವಿಷಯಗಳ ಸಂಬಂಧದಲ್ಲಿ ಕೈಗೊಂಡ ಕ್ರಮ.

(ಇ) ಗೌರವ ಪದವಿಗಳ ಮತ್ತು ಪ್ರಶಸ್ತಿಗಳ ಪ್ರದಾನ.

* * * *

ಅಧಿಸೂಚನೆ

(See notification in English)

## 2010ರ ಕರ್ನಾಟಕ ಅಧಿನಿಯಮ ಸಂಖ್ಯೆ 25

(2010ರ ಜುಲೈ ಇಪ್ಪತ್ತೂರನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ, 2010

(2010ರ ಜುಲೈ ಇಪ್ಪತ್ತೆರಡನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ನ್ನು (1985ರ ಕರ್ನಾಟಕ ಅಧಿನಿಯಮ 4) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ, 2010 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

ಪ್ರಕರಣ 2, 7, 9, 13, 15 ಮತ್ತು ಸಿಂಧುತ್ವವನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಲಾಗಿದೆ.

**7. ಸಿಂಧುತ್ವ.–** ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಮೂಲ ಅಧಿನಿಯಮದ ಅಡಿಯಲ್ಲಿ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದ ಅಡಿಯಲ್ಲಿ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಅದರ ಮೇಲೆ ಮಾಡಿದ ತನಿಖೆ, ವ್ಯವಹರಣೆಗಳು, ವಿಚಾರಣೆ ಅಥವಾ ಶಿಫಾರಸ್ಸು ಒಳಗೊಂಡಂತೆ ಯಾವುದೇ ಅಂಥ ಕ್ರಮವು, ಅಂಥ ಕ್ರಮವನ್ನು ಕೈಗೊಂಡ ಸಮಯದಲ್ಲಿ ಲೋಕಾಯುಕ್ತರಿಗೆ ಮೂಲ ಅಧಿನಿಯಮದ ಅಡಿ ಅಂಥ ಕ್ರಮ ಕೈಗೊಳ್ಳಲು ಅಧಿಕಾರ ಇರಲಿಲ್ಲವೆಂಬ ಕಾರಣದಿಂದಾಗಿಯೇ ಅಸಿಂಧುವಾಗಿವೇ ಎಂದು ಭಾವಿಸತಕ್ಕದ್ದಲ್ಲ ಮತ್ತು ಮೂಲ ಅಧಿನಿಯಮದ ಅಡಿಯಲ್ಲಿ ಲೋಕಾಯುಕ್ತನು, ಚಲಾಯಿಸಿದ ಯಾವುದೇ ಅಧಿಕಾರ ವ್ಯಾಪ್ತಿಯನ್ನು ಯಾವುದೇ ನ್ಯಾಯಾಲಯದ, ಪ್ರಾಧಿಕಾರದ ಅಥವಾ ನ್ಯಾಯಾಧಿಕರಣದ ಮುಂದೆ ಪ್ರಶ್ನಿಸತಕ್ಕದ್ದಲ್ಲ.

### ಅಧಿಸೂಚನೆ

**ಸಂಖ್ಯೆ: ಸಿಆಸುಇ 147 ಸೇಲೋಯು 2010, ಬೆಂಗಳೂರು, ದಿನಾಂಕ: 02.08.2010**

ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ, 2010 (2010ರ ಕರ್ನಾಟಕ ಅಧಿನಿಯಮ ಸಂಖ್ಯೆ: 25)ರ 1ನೇ ಪ್ರಕರಣ (2)ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯ ಸರ್ಕಾರವು ದಿನಾಂಕ: 23.07.2010ರಿಂದಲೇ ಸದರಿ ಅಧಿನಿಯಮದ ಉಪಬಂಧಗಳು ಜಾರಿಗೆ ಬಂದಿವೆಯೆಂದು ಪರಿಭಾವಿಸುತ್ತದೆಯೆಂದು ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಪಿ. ಮಾರ್ಕಂಡೇಯ**
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು–2)

## 2015ರ ಕರ್ನಾಟಕ ಅಧಿನಿಯಮ ಸಂಖ್ಯೆ: 35

(2015ರ ಆಗಸ್ಟ್ ತಿಂಗಳ ಹದಿನಾಲ್ಕನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ, 2015

(2015ರ ಆಗಸ್ಟ್ ತಿಂಗಳ ಹದಿಮೂರನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ನ್ನು (1985ರ ಕರ್ನಾಟಕ ಅಧಿನಿಯಮ 4) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

ಪ್ರಕರಣ 3, 6 ಮತ್ತು 12ನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಲಾಗಿದೆ.

### ಅಧಿಸೂಚನೆ

**ಸಂಖ್ಯೆ: ಸಿಆಸುಇ 112 ಸೇಲೋಯು 2015(ಭಾ), ಬೆಂಗಳೂರು, ದಿನಾಂಕ: 02.08.2010**

ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ, 2015 (2015ರ ಕರ್ನಾಟಕ ಅಧಿನಿಯಮ ಸಂಖ್ಯೆ: 35)ರ ಒಂದನೇ ಪ್ರಕರಣ (2)ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯ ಸರ್ಕಾರವು ಈ ಮೂಲಕ ಸದರಿ ಅಧಿನಿಯಮದ ಉಪಬಂಧಗಳು ತಕ್ಷಣದಿಂದ ಜಾರಿಗೆ ಬರುತ್ತವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಉಮಾ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)

## 2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 05

(2020ರ ಮಾರ್ಚ್ ತಿಂಗಳ 27ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ, 2020

(2020ರ ಮಾರ್ಚ್ ತಿಂಗಳ 26ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ನ್ನು (1985ರ ಕರ್ನಾಟಕ ಅಧಿನಿಯಮ 4) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**–(1) ಈ ಅಧಿನಿಯಮವನ್ನು ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಪ್ರಕರಣ 7ನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಲಾಗಿದೆ.

## 2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 36

(2020**ರ ಅಕ್ಟೋಬರ್ ತಿಂಗಳ** ಹತ್ತೊಂಬತ್ತ**ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)**

## ಕರ್ನಾಟಕ ಲೋಕಾಯುಕ್ತ (ಎರಡನೇ ತಿದ್ದುಪಡಿ)ಅಧಿನಿಯಮ, 2020

(2020**ರ ಅಕ್ಟೋಬರ್ ತಿಂಗಳ** ಹತ್ತೊಂಬತ್ತ**ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)**

ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಲೋಕಾಯುಕ್ತ ಅಧಿನಿಯಮ, **1984**ನ್ನು (1985ರ ಕರ್ನಾಟಕ ಅಧಿನಿಯಮ 4) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ**;**

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ**,** ಎಂದರೆ**:-**

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಲೋಕಾಯುಕ್ತ(ಎರಡನೇ ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು**.**

ಪ್ರಕರಣ 9 ಮತ್ತು 12ನ್ನು ಮೂಲ ಅಧಿನಿಮಯದಲ್ಲಿ ಇಂದೀಕರಿಸಲಾಗಿದೆ.